# ಮಂಗಳೂರು ವಿಶ್ವವಿದ್ಯಾನಿಲಯ

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಸಾರ ಸಿದ್ಧಪಡಿಸಿದ
ಸ್ನಾತಕ ಅಧ್ಯಯನ ಮಂಡಳಿಯಲ್ಲಿ ಅನುಮೋದನೆಗೊಂಡಿರುವ ಸ್ನಾತಕ ಪದವಿಗಳ
ಕನ್ನಡ ಭಾಷಾ ಪಠ್ಯ, ಬಿ.ಎ. ಐಚ್ಛಿಕ ಕನ್ನಡ, ಮುಕ್ತ ಆಯ್ಕೆ ಹಾಗೂ ಕಡ್ಡಾಯ ಕನ್ನಡ
ಪಠ್ಯಕ್ರಮ 2021-2022ನೇ ಶೈಕ್ಷಣಿಕ ಸಾಲಿನಿಂದ ಅನ್ವಯ

**ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ**

ರಾಷ್ಟ್ರೀಯ ಶಿಕ್ಷಣ ನೀತಿ 2020ರ ಹಿನ್ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ಪದವಿಗಳ ಕನ್ನಡ ಭಾಷಾ ಪಠ್ಯಗಳ ಬಿ.ಎ. ಐಚ್ಛಿಕ, ಮುಕ್ತ ಆಯ್ಕೆ ಹಾಗೂ ಕಡ್ಡಾಯ ಕನ್ನಡ ಪಠ್ಯಕ್ರಮ ರಚನೆಯ ಆಶಯ ಮತ್ತು ಪಠ್ಯದ ವಿಷಯ.

ಭಾರತ ಸರ್ಕಾರದ 2020ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕಲಿಕೆಯ ಫಲಿತ ಮತ್ತು ಸಾಧನೆಗಳ ಸಮತೋಲನಕ್ಕೆ ಮಹತ್ತ್ವ ನೀಡಲಾಗಿದೆ. ಕಲೆ ಮತ್ತು ವಿಜ್ಞಾನ, ವಾಣಿಜ್ಯ, ಶುದ್ಧ ಶೈಕ್ಷಣಿಕ ಚಟುವಟಿಕೆಗಳು, ವೃತ್ತಿಪರ ಶಿಕ್ಷಣ ಮತ್ತು ಪಠ್ಯೇತರ ಚಟುವಟಿಕೆಗಳ ನಡುವೆ ಪೂರಕ ಸಂಬಂಧ ಇರಬೇಕೆಂಬುದು ಅದರ ಮುಖ್ಯ ಆಶಯವಾಗಿರುವುದು ವಿಶಿಷ್ಟ ಸಂಗತಿಯಾಗಿದೆ. ಅಲ್ಲದೆ ಬೋಧನೆ ಮತ್ತು ಕಲಿಕೆಯ ಬಹುಭಾಷಿಕತೆಗೆ ಪ್ರೋತ್ಸಾಹ ನೀಡುವ ಬಗೆಗೂ ಒತ್ತುಕೊಟ್ಟಿರುವುದು ಮಹತ್ತ್ವದ ವಿಷಯವಾಗಿದೆ. ಶಿಕ್ಷಣ ವ್ಯವಸ್ಥೆ ಮತ್ತು ವಿದ್ಯಾರ್ಥಿಗಳ ವ್ಯಕ್ತಿತ್ವ ಬೆಳವಣಿಗೆಯಲ್ಲಿ ಭಾಷೆಗಳು ವಹಿಸುವ ನಿರ್ಣಾಯಕವಾದ ಪಾತ್ರವನ್ನು ಹೊಸ ಶಿಕ್ಷಣ ನೀತಿಯು ಒಪ್ಪಿದೆ. ವಿದ್ಯಾರ್ಥಿಗಳು ಶಿಕ್ಷಣ ವ್ಯವಸ್ಥೆಯಲ್ಲಿ ಮುಂದುವರಿಯಲು ಎಲ್ಲ ಬಗೆಯ ತೀರ್ಮಾನಗಳಲ್ಲಿ ಪೂರ್ಣ ಸ್ವಾತಂತ್ರ್ಯ, ಸಮಾನತೆ ಮತ್ತು ಸಮಾವರ್ತನೆ (ಇನ್‌ಕ್ಲೂಸಿವ್)ಗಳನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸುತ್ತಾ ಈ ಬಗೆಯ ಕ್ರಿಯಾಶೀಲತೆಯನ್ನು ಪ್ರೋತ್ಸಾಹಿಸಲು ಉನ್ನತ ಶಿಕ್ಷಣ ಸಂಸ್ಥೆಗಳು ವಿಶ್ವವಿದ್ಯಾಲಯಗಳು ಸೇರಿದಂತೆ ಮಹಾವಿದ್ಯಾಲಯಗಳು ಪಠ್ಯಕ್ರಮ ಅಧ್ಯಯನ ಮತ್ತು ಮೌಲ್ಯಮಾಪನ ವಿಧಾನಗಳಲ್ಲಿ ಹೊಸತನವನ್ನು ಅಳವಡಿಸಲು ಸ್ವಾತಂತ್ರ್ಯವನ್ನು ನೀಡಿದೆ. ಸಂಪರ್ಕ ಮಾಧ್ಯಮದ ಜೊತೆಗೆ ಸಂಸ್ಕೃತಿ ಮತ್ತು ಮೌಲ್ಯಗಳನ್ನು ನಾಲ್ಕು ವರ್ಷದ ಬಹುಶಿಸ್ತೀಯ ಪದವಿ ಕೋರ್ಸುಗಳಲ್ಲಿ ಬೆಳೆಸುವುದು ಭಾಷಾ ಕಲಿಕೆಯ ಉದ್ದೇಶವಾಗಿದೆ. ಅಲ್ಲದೆ ಭಾಷೆ, ಸಾಹಿತ್ಯ ಮತ್ತು ಭಾಷಾ ಕಲಿಕೆ ಶಿಕ್ಷಣದ ಪ್ರಧಾನ ಕಾಳಜಿಯಾಗಿದೆ. ಕಲಿಕೆಯ ಮಾಧ್ಯಮದ ಜೊತೆಗೆ ವೈಯಕ್ತಿಕ, ಸಾಮಾಜಿಕ, ಆಡಳಿತಾತ್ಮಕ, ಔದ್ಯೋಗಿಕ, ವಾಣಿಜ್ಯ ವ್ಯವಹಾರ ನಿರ್ವಹಣೆಗಳ ಮೇಲೆ ಮಹತ್ತ್ವವನ್ನು ನೀಡುವುದಾಗಿದೆ. ಇದನ್ನು ಸಾಂದ್ರವಾಗಿ ಮತ್ತು ಹಿತವಾಗಿ ಅಭಿವ್ಯಕ್ತಿಸಬೇಕಾಗಿದೆ. ಸಂವಹನ ಕೌಶಲ್ಯದ ಮೂಲಕ ಅತಿ ಮಹತ್ತ್ವದ ಎಲ್ಲ ಬಗೆಯ ಜ್ಞಾನ ತಿಳುವಳಿಕೆ ಹೆಚ್ಚಿಸುವುದರ ಜೊತೆಗೆ ಉಳಿದೆಲ್ಲ ಜ್ಞಾನಶಿಸ್ತುಗಳನ್ನು ಜೋಡಿಸುವುದಾಗಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಹಲವು ಹೊಸತನಗಳಿಂದ ಕೂಡಿದೆ. ಬದಲಾಗುತ್ತಿರುವ ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಜಾಗತಿಕ ವಿದ್ಯಮಾನಗಳಿಗೆ ಅನುಗುಣವಾದ ಶಿಕ್ಷಣ ಮಾದರಿಯನ್ನು ರೂಪಿಸುವುದು ಇದರ ಮೂಲ ಉದ್ದೇಶವಾಗಿದೆ, ಸಾಂಪ್ರದಾಯಿಕ ಶಿಕ್ಷಣ ಕ್ರಮಕ್ಕಿಂತ ಭಿನ್ನವಾದ ಶಿಕ್ಷಣ ನೀತಿ ಇದಾಗಿದೆ. ವಿದ್ಯಾರ್ಥಿಗಳನ್ನು ಸಮಕಾಲೀನ ಸವಾಲುಗಳನ್ನು ಎದುರಿಸಲು ಬೇಕಾದ ಸದೃಢ ವ್ಯಕ್ತಿತ್ವಗಳಾಗಿ ರೂಪಿಸುವ ಆಶಯ ಇಲ್ಲಿದೆ. ಕಲಿಕೆ ಮತ್ತು ಫಲಿತಗಳ ನಡುವೆ ಸಮತೋಲನವನ್ನು ಸಾಧಿಸುವುದಕ್ಕೆ ಹೊಸ ಶಿಕ್ಷಣ ನೀತಿಯಲ್ಲಿ ಮಹತ್ತ್ವ ನೀಡಲಾಗಿದೆ. ಈ ತನಕದ ವರ್ಗೀಕೃತ ಶಿಕ್ಷಣ ಕ್ರಮ ಜಾಗದಲ್ಲಿ ಒಳಗೊಳ್ಳುವ (ಖಿಟಿಛಿಟಣುತಜ) ವಿಧಾನವನ್ನು ಅನುಸರಿಸಲಾಗಿದೆ. ಅಂದರೆ ಇಲ್ಲಿಯವರೆಗೆ ಸಮಾನಾಂತರವಾಗಿದ್ದ ಶಿಕ್ಷಣ ಶಿಸ್ತುಗಳು ಈಗ ಪರಸ್ಪರ ಪೂರಕವಾಗಿವೆ. ಕಲೆ ಮತ್ತು ವಿಜ್ಞಾನ, ವಾಣಿಜ್ಯ, ಶುದ್ಧ ಶೈಕ್ಷಣಿಕ ಚಟುವಟಿಕೆಗಳು ವೃತ್ತಿಪರ ಶಿಕ್ಷಣ ಮತ್ತು ಪಠ್ಯೇತರ ಚಟುವಟಿಕೆಗಳು ಈ ಶಿಕ್ಷಣ ನೀತಿಯಲ್ಲಿ ಒಂದೇ ವಿಶಾಲ ಭಿತ್ತಿಯಲ್ಲಿ ಕಾಣಿಸಿಕೊಂಡಿವೆ. ಇದು ಹೊಸ ಶಿಕ್ಷಣ ನೀತಿಯ ಮುಖ್ಯ ಆಶಯವಾಗಿರುವುದು ವಿಶಿಷ್ಟವಾದ ಸಂಗತಿಯಾಗಿದೆ. ಅಲ್ಲದೆ ಬೋಧನೆ ಮತ್ತು ಕಲಿಕೆಯಲ್ಲಿ ಬಹುಭಾಷಿಕತೆಗೆ ಪ್ರೋತ್ಸಾಹ ನೀಡುವ ಬಗೆಗೂ ಹೇಳಿರುವುದು ಮಹತ್ತ್ವದ ಮತ್ತು ಸಮಕಾಲೀನ ಸವಾಲನ್ನು ಎದುರಿಸುವ ವಿಧಾನವೂ ಆಗಿದೆ. ವಿದ್ಯಾರ್ಥಿಗಳೂ ಶಿಕ್ಷಣ ವ್ಯವಸ್ಥೆಯಲ್ಲಿ ಮುಂದುವರೆಯಲು ಎಲ್ಲ ಬಗೆಯ ಅವಕಾಶಗಳನ್ನು ಮುಕ್ತವಾಗಿರಿಸಲಾಗಿದೆ. ಹೀಗೆ ಮಾಡುವುದರ ಮೂಲಕ ಶಿಕ್ಷಣದ ಪ್ರತಿ ಹಂತದಲ್ಲೂ ಹೊರಬರುವ ಅವಕಾಶವನ್ನು ಕೊಡುವುದರ ಮೂಲಕ ಅದು ತನ್ನಷ್ಟಕ್ಕೆ ತಾನು ಸ್ವತಂತ್ರ ಹಾಗೂ ಪೂರ್ಣ ಕೋರ್ಸ್ ಆಗಿರುವಂತೆ ರೂಪಿಸಲಾಗಿದೆ.

ಈ ಎಲ್ಲ ಆಶಯಗಳನ್ನು ಸಾಕಾರಗೊಳಿಸಲು ಉನ್ನತ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಸೇರಿದಂತೆ ಮಹಾವಿದ್ಯಾಲಯಗಳ ಪಠ್ಯಕ್ರಮ, ಅಧ್ಯಯನ ಮತ್ತು ಮೌಲ್ಯಮಾಪನ ವಿಷಯಗಳಲ್ಲಿ ಹೊಸತನವನ್ನು ಅಳವಡಿಸಲು, ಅವಕಾಶ ನೀಡುವುದರ ಹಿನ್ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆಯು ಬದ್ಧವಾಗಿದ್ದು ವಿಶ್ವವಿದ್ಯಾನಿಲಯದ ಸೂಚನೆಗನುಗುಣವಾಗಿ ಪಠ್ಯಕ್ರಮಗಳ ಸಿದ್ಧತೆ ಮತ್ತು ಅಳವಡಿಕೆಗೆ ಹೆಚ್ಚಿನ ಒತ್ತನ್ನು ನೀಡಿದೆ. ಜಾಗತೀಕರಣ ಮತ್ತು ಮಾರುಕಟ್ಟೆ ಆಧಾರಿತ ಆರ್ಥಿಕ ನೀತಿಗಳಿಂದಾಗಿ ದೇಶಿಯ ಭಾಷೆಗಳು ಹಿನ್ನಡೆ ಅನುಭವಿಸುತ್ತಿರುವುದರಿಂದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣವನ್ನು ಅನ್ಯ ಭಾಷೆಗಳ ಅತಿಯಾದ ಅವಲಂಬನೆಯಿಂದ ತಪ್ಪಿಸಿ ಪ್ರಾದೇಶಿಕ ಭಾಷೆಗಳ ಮಾಧ್ಯಮದ ಮೂಲಕ ಕಲಿಸುವುದಕ್ಕೆ ಒತ್ತು ನೀಡುವುದಕ್ಕೆ ಆದ್ಯತೆ ನೀಡಿರುವ ಹಿನ್ನೆಲೆಯಲ್ಲಿ ಕನ್ನಡ ಭಾಷೆಯು ಈ ಅವಕಾಶವನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಲು ಮುಂದಾಗಿದೆ.

ಕಲೆ, ವಿಜ್ಞಾನ, ವಾಣಿಜ್ಯ, ಮಾನವಿಕ, ಶಿಕ್ಷಣ, ಕಾನೂನು ಆಯಾ ಜ್ಞಾನ ಶಿಸ್ತುಗಳಲ್ಲಿ ವಿದ್ಯಾರ್ಥಿಗಳು ಜ್ಞಾನ ಪಡೆಯುವುದು ಸರಿಯಷ್ಟೇ. ಆಯಾ ಕ್ಷೇತ್ರದ ಜ್ಞಾನ ಶಿಸ್ತುಗಳ ಜ್ಞಾನವು ಸಾಕ್ಷಾತ್ಕಾರಗೊಳ್ಳುವುದು ಭಾಷೆ ಮತ್ತು ಸಾಹಿತ್ಯದಿಂದ ಮಾತ್ರ ಸಮಾಜದಲ್ಲಿ

ಮನುಷ್ಯ ಉತ್ತಮ ನಾಗರಿಕನಾಗಿ ಬದುಕಲು ಅಗತ್ಯವಾದ ಸಂವೇದನೆಯನ್ನು ಭಾಷೆ ಮತ್ತು ಸಾಹಿತ್ಯ ರೂಪಿಸುತ್ತವೆ. ಭಾಷೆ ಕೇವಲ ಮಾಧ್ಯಮವಾಗಿರದೇ ಅದೊಂದು ಸಂಸ್ಕೃತಿಯಾಗಿರುತ್ತದೆ.

ಬಿ.ಎ., ಬಿ.ಎಸ್ಸಿ, ಬಿ.ಕಾಂ, ಬಿ.ಬಿ.ಎ., ಬಿ.ಸಿ.ಎ, ಬಿ.ಎಸ್.ಡಬ್ಲ್ಯೂ ಮುಂತಾದ ಪದವಿ ಕೋರ್ಸುಗಳ ಮೊದಲ ನಾಲ್ಕು ಸೆಮಿಸ್ಟರ್‌ಗಳಲ್ಲಿ ಭಾಷೆ ಮತ್ತು ಸಾಹಿತ್ಯದ ಬೋಧನೆ ಮಾಡುವಾಗ ವಿಷಯಾಧಾರಿತ ಪಠ್ಯಗಳಿಗೆ ಹೆಚ್ಚಿನ ಆದ್ಯತೆಯನ್ನು ಪಠ್ಯಗಳ ಸಿದ್ಧಪಡಿಸುವಿಕೆಯಲ್ಲಿ ನೀಡಲಾಗಿದೆ. ಆಯಾ ಕೋರ್ಸುಗಳಿಗೆ ಅನುಗುಣವಾಗಿ ಪಠ್ಯ ನಿಗದಿಪಡಿಸುವಾಗ ಮಾನವೀಯ ಮೌಲ್ಯಗಳಿಗೆ ಮತ್ತು ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯವನ್ನು ರಚಿಸುವ ಪ್ರಯತ್ನವನ್ನು ಮಾಡಲಾಗಿದೆ.

**ಕನ್ನಡ ಪಠ್ಯಕ್ರಮ ವಿನ್ಯಾಸ ಆಶಯಗಳು**

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳಿಗೆ ಅನುಗುಣವಾಗಿ ಕನ್ನಡ ಭಾಷಾ, ಐಚ್ಛಿಕ, ಮುಕ್ತ ಆಯ್ಕೆ ಕನ್ನಡ, ಕನ್ನಡೇತರರಿಗೆ ಕನ್ನಡ ಪಠ್ಯ ಕ್ರಮಗಳ ವಿನ್ಯಾಸವನ್ನು ರೂಪಿಸಲಾಗಿದೆ.

ಕರ್ನಾಟಕದಾದ್ಯಂತ ವಿವಿಧ ವಿಶ್ವವಿದ್ಯಾಲಯಗಳು ಈತನಕ ಅರ್ಥಪೂರ್ಣವಾದ ಹಾಗೂ ವೈವಿಧ್ಯಮಯ ಪಠ್ಯಕ್ರಮಗಳನ್ನು ಅನುಸರಿಸುತ್ತಾ ಬಂದಿವೆ. ಸಾಹಿತ್ಯದ ಮೂಲಗುಣವಾದ ನಿತ್ಯನೂತನತೆಗೆ ಅನುಗುಣವಾಗಿ ಹೊಸತನವನ್ನು ತರಲು ಪ್ರಯತ್ನಿಸಲಾಗಿದೆ. ಈಗ ಹೊಸ ಪಠ್ಯಕ್ರಮದ ಪ್ರಕಾರ ಪ್ರಯೋಗಿಸಲ್ಪಟ್ಟು ಯಶಸ್ವಿಯಾಗಿರುವ ಮಂಗಳೂರು ವಿಶ್ವವಿದ್ಯಾನಿಲಯವು 'ವಿಷಯಾಧಾರಿತ ಪಠ್ಯಕ್ರಮ ವನ್ನು ಅಳವಡಿಸಲು ಉದ್ಯುಕ್ತವಾಗಿದೆ. ಈ ಮೂಲಕ ಕಲಿಕೆ ಮತ್ತು ಫಲಿತಗಳ ನಡುವಿನ ಸಮತೋಲನವನ್ನು ಸಾಧಿಸುವುದು ಸಾಧ್ಯವಾಗುತ್ತದೆ. ಶಿಕ್ಷಣವು ವಿದ್ಯಾರ್ಥಿಗಳಿಗೆ ಭಾಷಾ ಕೌಶಲ್ಯ, ಸಾಹಿತ್ಯದ ಮಾನವೀಯ ಸಂವೇದನೆ, ಸಮಕಾಲೀನ ವಿದ್ಯಮಾನಗಳ ಅರಿವು, ಸಂಸ್ಕೃತಿಯ ಬೆಳಕು ಮತ್ತು ರಾಷ್ಟ್ರೀಯತೆಯ ಮನೋಭಾವವನ್ನು ಕಟ್ಟಿಕೊಡುವುದರಲ್ಲಿ ಯಶಸ್ವಿಯಾಗಬೇಕು ಎನ್ನುವ ಹೊಸ ಶಿಕ್ಷಣ ನೀತಿಯ ಆಶಯವನ್ನು ವಿಷಯಾಧಾರಿತ ಪಠ್ಯಕ್ರಮದ ಮೂಲಕ ಸಾಧಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಉದಾಹರಣೆಗೆ - 'ನಾಡು-ನುಡಿ-ಚಿಂತನೆ , 'ಸಾಮರಸ್ಯ , 'ಪರಿಸರ ಜಾಗತೀಕರಣ ಮೊದಲಾದವು ವಿದ್ಯಾರ್ಥಿಗಳಲ್ಲಿ ಉದ್ದೇಶಿತ ಫಲಿತಗಳನ್ನು ನೀಡುತ್ತವೆ. ಹಾಗೆಯೇ ಆಯಾ ಅಧ್ಯಯನ ಶಿಸ್ತುಗಳ ಸ್ವರೂಪಕ್ಕನುಗುಣವಾಗಿ ಒಂದು ಘಟಕವನ್ನು ಸ್ನಾತಕ ಅಧ್ಯಯನ ಮಂಡಳಿಯಲ್ಲಿ ಪರಿಶೀಲಿಸಿ ರೂಪಿಸಿ ಸಿದ್ಧಪಡಿಸಲಾಗಿದೆ.

ಭಾಷಾ ಪಠ್ಯಗಳನ್ನು ನಾಲ್ಕು ಸೆಮಿಸ್ಟರ್‌ಗಳಲ್ಲಿ ಪ್ರಥಮ ಭಾಷೆಯಾಗಿ ಬೋಧಿಸತಕ್ಕದ್ದು, ಪ್ರತಿ ಸೆಮಿಸ್ಟರ್‌ಗೂ 3 ಕ್ರೆಡಿಟ್‌ಗಳು ಹಾಗೂ ನಾಲ್ಕು ಗಂಟೆ ಬೋಧನಾ ಅವಧಿ ಇರುತ್ತದೆ. ಐಚ್ಛಿಕ ಕನ್ನಡ ಪಠ್ಯಕ್ರಮವನ್ನು ಸಿದ್ಧಪಡಿಸಿದ್ದು ಪ್ರತಿ ಸೆಮಿಸ್ಟರ್‌ಗೂ 3 ಕ್ರೆಡಿಟ್‌ಗಳು ಹಾಗೂ 3 ಗಂಟೆ ಬೋಧನಾ ಅವಧಿ ಇರುತ್ತದೆ. ಪ್ರತಿ ಸೆಮಿಸ್ಟರ್‌ಗೆ ಕಡ್ಡಾಯ ಕನ್ನಡ (ಕನ್ನಡೇತರರಿಗೆ ಕನ್ನಡ-ಕನ್ನಡ ಕಲಿಕೆ) ಪಠ್ಯಕ್ರಮವನ್ನು ಒಂದು ಸೆಮಿಸ್ಟರ್‌ನಲ್ಲಿ ಬೋಧಿಸುವುದು. ಮುಕ್ತ ಆಯ್ಕೆ ಕನ್ನಡ ಪ್ರತಿಕೆಗೆ (ಕನ್ನಡ ಭಾಷೆ ಮತ್ತು ಐಚ್ಛಿಕ ಕನ್ನಡ) ನಾಲ್ಕು ಪತ್ರಿಕೆಗಳನ್ನು ಸಿದ್ಧಪಡಿಸಲಾಗಿದೆ. ಮುಕ್ತ ಆಯ್ಕೆ ಕನ್ನಡ ಪತ್ರಿಕೆಗಳನ್ನು ಎಲ್ಲ ಅಧ್ಯಯನ ಶಿಸ್ತುಗಳ ವಿದ್ಯಾರ್ಥಿಗಳೂ ನಾಲ್ಕು ಸೆಮಿಸ್ಟರ್‌ಗಳಿಗೂ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ವಿದ್ಯಾರ್ಥಿಗಳಿಗೆ ಕಲಿಕೆಯು ಹೆಚ್ಚು ಪ್ರಾಯೋಗಿಕವಾಗಿರುವಂತೆ 'ಕ್ರಿಯಾ ಪುಸ್ತಕ ವನ್ನು ರೂಪಿಸಲು ಅವಕಾಶವನ್ನು ಕಲ್ಪಿಸಿ ಕೊಡಲಾಗಿದೆ.

**ಪದವಿ ಕನ್ನಡ ಭಾಷಾ ಪಠ್ಯಗಳು**

1. ಕಲಾ ಕನ್ನಡ (ಬಿ.ಎ./ಬಿ.ಎಸ್.ಡಬ್ಲ್ಯೂ/ಹೆಚ್.ಆರ್.ಡಿ/ ಎಸ್.ಡಿ.ಎಸ್) ಪ್ರಥಮ ಸೆಮಿಸ್ಟರ್
2. ವಿಜ್ಞಾನ ಕನ್ನಡ (ಬಿಎಸ್ಸಿ/ಬಿ.ಎಸ್ಸಿ (ಎಫ್‌ಎನ್‌ಡಿ), ಬಿ.ಎಸ್ಸಿ (ಹೆಚ್.ಎಸ್), ಬಿ.ಎಸ್ಸಿ (ಸಿಎಸ್), ಬಿ.ಎಸ್ಸಿ (ಫ್ಯಾಶನ್ ಡಿಸೈನ್), ಬಿ.ಎಸ್ಸಿ (ಗಾರ್ಮೆಂಟ್ ಡಿಸೈನ್), ಬಿ.ಎಸ್ಸಿ (ಲೆದರ್ ಡಿಸೈನ್), ಬಿ.ಎಸ್ಸಿ (ಇಂಟೀರಿಯರ್ ಡಿಸೈನ್ ಆ್ಯಂಡ್ ಡೆಕೋರೇಶನ್), ಬಿ.ಎಸ್ಸಿ (ಅನಿಮೇಶನ್ ಆ್ಯಂಡ್ ವಿಜುವಲ್ ಇಫೆಕ್ಟ್), ಬಿ.ಎಸ್ಸಿ (ಕೌನ್ಸಿಲಿಂಗ್), ಬಿ.ಎಸ್ಸಿ (ಫುಡ್ ಟೆಕ್ನಾಲಜಿ) ಪ್ರಥಮ ಸೆಮಿಸ್ಟರ್
3. ಗಣಕ ಕನ್ನಡ (ಬಿ.ಸಿ.ಎ) ಪ್ರಥಮ ಸೆಮಿಸ್ಟರ್
4. ವಾಣಿಜ್ಯ ಕನ್ನಡ (ಬಿ.ಕಾಂ) ಪ್ರಥಮ ಸೆಮಿಸ್ಟರ್
5. ವ್ಯವಹಾರ ನಿರ್ವಹಣ ಕನ್ನಡ (ಬಿ.ಬಿ.ಎ) ಪ್ರಥಮ ಸೆಮಿಸ್ಟರ್

Course Articulation Matrix Mapping of Course Outcomes (Cos)

with Program Outcomes (Pos 1-12)

| Course Outcomes (Cos)/<br>Program Outcomes (Pos) | ಬಿ.ಎ.,<br>ಬಿ.ಎಸ್.ಡಬ್ಲ್ಯು | ಬಿ.ಎಸ್ಸಿ.<br>ಬಿ.ಎಸ್ಸಿ.<br>(ಫ್ಯಾಡ್) | ಬಿ.ಕಾಂ. | ಬಿ.ಸಿ.ಎ | ಬಿ.ಬಿ.ಎ | ಐಚ್ಛಿಕ<br>ಕನ್ನಡ | ಮುಕ್ತ<br>ಆಯ್ಕೆ | ಕಡ್ಡಾಯ<br>ಕನ್ನಡ<br>ಕನ್ನಡ<br>ಕನ್ನಡೇತ<br>ರರಿಗೆ ಕನ್ನಡ |
|---|---|---|---|---|---|---|---|---|
| 1. ವಿವಿಧ ಬರಹಗಾರರು, ಸಾಹಿತ್ಯ ಕೃತಿಗಳು ಮತ್ತು ಸಾಹಿತ್ಯ ಚಟುವಳಿಗಳ ಅರಿವು ಹೆಚ್ಚಿಸಿಕೊಳ್ಳುವುದು | | | | | | | | |
| 2. ವಿವಿಧ ಸಾಹಿತ್ಯ ಪ್ರಕಾರಗಳ ರೂಪ ಸ್ವರೂಪಗಳ ಬಗೆಗೆ ತಿಳುವಳಿಕೆ ಪಡೆಯುವುದು | | | | | | | | |
| 3. ಭಾಷೆ-ಸಾಹಿತ್ಯದದ ಶ್ರೀಮಂತಿಕೆಯ ಜೊತೆಗೆ ಮಾನವಿಯ ಮೌಲ್ಯಗಳನ್ನು ಮೂಡಿಸಿಕೊಳ್ಳುವುದು | | | | | | | | |
| 4. ಸಾಹಿತ್ಯ ಮೂಲಕ ಸಮಾಜೋ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ತಿಳುವಳಿಕೆಯನ್ನು ಹೊಂದುವುದು | | | | | | | | |
| 5. ವೈಚಾರಿಕ-ವೈಜ್ಞಾನಿಕ ಚಿಂತನೆಗಳನ್ನು ಅಳವಡಿಸಿಕೊಳ್ಳುವುದು | | | | | | | | |
| 6. ಭಾಷಾ ಕೌಶಲ್ಯವನ್ನೂ ಬೆಳೆಸಿಕೊಳ್ಳುವುದು | | | | | | | | |
| 7. ಸಾಹಿತ್ಯದ ಓದು, ತಿಳುವಳಿಕೆ ಹಾಗೂ ಬರವಣಿಗೆಯನ್ನು ರೂಡಿಸಿಕೊಳ್ಳುವುದು | | | | | | | | |
| 8. ನಾಡು-ನುಡಿಯನ್ನು ಕುರಿತ ಅರಿವನ್ನು ಹೆಚ್ಚಿಸಿಕೊಳ್ಳುವುದು | | | | | | | | |
| 9. ಸಮಕಾಲೀನ ವಿದ್ಯಮಾನಗಳ ಅರಿವು | | | | | | | | |
| 10. ಸಾಮಾಜಿಕ ಹೊಣೆಗಾರಿಕೆಯ ಅರಿವು | | | | | | | | |
| 11. ಸದೃಢ ಬೌದ್ಧಿಕ ವ್ಯಕ್ತಿತ್ವ ನಿರ್ಮಾಣ | | | | | | | | |

**ಆಂತರಿಕ ಮೌಲ್ಯಮಾಪನ ಮತ್ತು ಸೆಮಿಸ್ಟರ್ ಕೊನೆಯ ಲಿಖಿತ ಪರೀಕ್ಷಾ ವಿಧಾನದ ಸಲಹೆ ಮತ್ತು ಮಾದರಿ**

ಈ ಸಮಿತಿಯು ಆಂತರಿಕ (ಸಿಐಇ) ಹಾಗೂ ಸೆಮಿಸ್ಟರ್ ಕೊನೆಯ ಲಿಖಿತ ಪರೀಕ್ಷೆ (ಎಸ್‌ಇಇ)ಗಳ ವಿಧಾನವನ್ನು ಕುರಿತಂತೆ ಈ ಕೆಳಗಿನ ಸಲಹೆ ನೀಡಲು ಬಯಸುತ್ತದೆ. ಪಠ್ಯಚೌಕಟ್ಟು ಸಮಿತಿ ಸೂಚನೆಯಂತೆ ಆಂತರಿಕ (ಸಿಐಇ) ಮೌಲ್ಯಮಾಪನವು ಶೇ 40 ಅಂಕಗಳನ್ನು ಹಾಗೂ ಸೆಮಿಸ್ಟರ್ ಕೊನೆಯ ಪರೀಕ್ಷೆಯ (ಎಸ್‌ಇಇ) ಶೇ. 60 ಅಂಕಗಳ ನಿಯಮವನ್ನು ಈ ಕೆಳಗಿನ ಮಾನದಂಡಗಳನ್ನು ಅನುಸರಿಸಿ ಮಾಪನ ಮಾಡಲು ಸೂಚಿಸುತ್ತದೆ.

ಪ್ರತಿ ಪತ್ರಿಕೆಗಳ ಒಟ್ಟು ಪಾಠ ಘಟಕಗಳು - 04 (ಪ್ರಾಥಮಿಕ ಪರಿಚಯ, ಸೈದ್ಧಾಂತಿಕ ವಿವರಣೆ ಸೇರಿದಂತೆ)

| **ಪರೀಕ್ಷೆ** | **ಸಮಯ** | **ಅಂಕಗಳು** |
|---|---|---|
| TEST C-1 | ಪ್ರತಿ ಸೆಮಿಸ್ಟರ್‌ನ ಪೂರ್ವಾರ್ಧದ ಕೊನೆಗೆ 7-8ನೇ ವಾರಗಳಲ್ಲಿ | 10 |
| TEST C-2 | ಪ್ರತಿ ಸೆಮಿಸ್ಟರ್‌ನ ಉತ್ತರಾರ್ಧದ ಕೊನೆಗೆ 15-16ನೇ ವಾರಗಳಲ್ಲಿ | 10 |
| ಅ-1 | ನಿಯೋಜಿತ ಪ್ರಬಂಧ, ವಿಚಾರ ಸಂಕಿರಣ (ಮೊದಲ 2 ತಿಂಗಳು) | 05 |
| ಅ-2 | ರಸಪ್ರಶ್ನೆ, ಗುಂಪು ಚರ್ಚೆ, ವಿಚಾರ ಗೋಷ್ಠಿ (ಕೊನೆಯ 2 ತಿಂಗಳು) | 05 |
| ಅ-1 | ವಿಚಾರ ಸಂಕಿರಣ | 05 |
| ಅ-2 | ನಿಯೋಜಿತ ಪ್ರಬಂಧ, ಗುಂಪು ಚರ್ಚೆ, ವಿಚಾರ ಗೋಷ್ಠಿ | 05 |
| | **ಒಟ್ಟು ಅಂಕಗಳು** | **40** |
| ಅ-3 | ಪ್ರತಿ ಸೆಮಿಸ್ಟರ್‌ನ ಅಂತಿಮ ಪರೀಕ್ಷೆ ಸಮಯ 3 ಗಂಟೆಗಳು 60 ಅಂಕಗಳು | 60 |
| | **ಒಟ್ಟು ಅಂಕಗಳು** | **100** |

**ಸೆಮಿಸ್ಟರ್ ಅಂತ್ಯದ ಪರೀಕ್ಷೆ (ಎಸ್‌ಇಇ)**

ಈ ವಿಧಾನವು 60 ಅಂಕಗಳ ಲಿಖಿತ ಪರೀಕ್ಷೆಗಳಿಂದ ಕೂಡಿರುತ್ತದೆ. ಈ ಪರೀಕ್ಷೆಯು ಆಯಾ ವಿಶ್ವವಿದ್ಯಾನಿಲಯಗಳೂ ಹಾಗೂ ಅಟಾನಮಸ್ ಕಾಲೇಜುಗಳ ಪರೀಕ್ಷಾ ನಿಯಮಾನುಸಾರ ನಡೆಯುವುದರಿಂದ ವಿಶ್ವವಿದ್ಯಾನಿಲಯಗಳು ನಿಗದಿಪಡಿಸಿರುವ ಪರೀಕ್ಷಾ ಅರ್ಹತೆಗಳನ್ನು ವಿದ್ಯಾರ್ಥಿಯು ಪರಿಪೂರ್ಣಗೊಳಿಸಬೇಕು. ನಂತರ ಆಯಾ ವಿಶ್ವವಿದ್ಯಾನಿಲಯಗಳ ಬಿಓಎಸ್‌ಗಳು, ಬಿಬಿಇ ಸದಸ್ಯರು ರೂಪಿಸುವ ಮಾನದಂಡಗಳಂತೆ ಪರೀಕ್ಷೆ ನಡೆಯಲಿದೆ.

**ಭಾಷಾ ಕನ್ನಡ ಪಠ್ಯ ಚೌಕಟ್ಟು**

**ಬಿ.ಎ., ಬಿ.ಎಸ್.ಡಬ್ಲ್ಯು - ಕನ್ನಡ ಭಾಷಾ ಪಠ್ಯ**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು 1, 2, 3, 4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟ್ ತರಗತಿಗಳು 04 (ಒಟ್ಟು 52-56 ಗಂಟೆಗಳು)

| **ಸೆಮಿಸ್ಟರ್** | **ಘಟಕ-1** | **ಘಟಕ-2** | **ಘಟಕ-3** | **ಘಟಕ-4** |
|---|---|---|---|---|
| ಪ್ರಥಮ ಸೆಮಿಸ್ಟರ್ | ಕನ್ನಡ ನಾಡು-ನುಡಿ-ಚಿಂತನೆ | ಪ್ರಕೃತಿ | ಬಾಲ್ಯ | ಸಂಕೀರ್ಣ |
| ಐ, 1-1 | 15 ಗಂಟೆಗಳು | 15 ಗಂಟೆಗಳು | 13 ಗಂಟೆಗಳು | 13 ಗಂಟೆಗಳು |

| | | | | |
|---|---|---|---|---|
| ದ್ವಿತೀಯ ಸೆಮಿಸ್ಟರ್ | ಜಾಗತೀಕರಣ | ಸಮಾಜ | ಪ್ರೀತಿ | ಸಂಕೀರ್ಣ |
| ಐ, 1-2 | 15 ಗಂಟೆಗಳು | 15 ಗಂಟೆಗಳು | 13 ಗಂಟೆಗಳು | 13 ಗಂಟೆಗಳು |

**ಬಿ.ಎಸ್ಸಿ-ಕನ್ನಡ ಭಾಷಾ ಪಠ್ಯ**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು 1,2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52-56 ಗಂಟೆಗಳು)

| **ಸೆಮಿಸ್ಟರ್** | **ಘಟಕ-1** | **ಘಟಕ-2** | **ಘಟಕ-3** | **ಘಟಕ-4** |
|---|---|---|---|---|
| ಪ್ರಥಮ ಸೆಮಿಸ್ಟರ್ | ಕನ್ನಡ ನಾಡು-ನುಡಿ-ಚಿಂತನೆ | ಭೂಮಿ | ವೈಜ್ಞಾನಿಕ ಮನೋಧರ್ಮ | ಸಂಕೀರ್ಣ |
| ಐ, 1-1 | 15 ಗಂಟೆಗಳು | 15 ಗಂಟೆಗಳು | 13 ಗಂಟೆಗಳು | 13 ಗಂಟೆಗಳು |
| ದ್ವಿತೀಯ ಸೆಮಿಸ್ಟರ್ | ಜೀವನಕಲೆ | ಕನಸು | ಮಳೆ | ಸಂಕೀರ್ಣ |
| ಐ, 1-2 | 15 ಗಂಟೆಗಳು | 15 ಗಂಟೆಗಳು | 13 ಗಂಟೆಗಳು | 13 ಗಂಟೆಗಳು |

**ಬಿ.ಸಿ.ಎ-ಕನ್ನಡ ಭಾಷಾ ಪಠ್ಯ**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು 1, 2, 3, 4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52 ಗಂಟೆಗಳು)

| **ಸೆಮಿಸ್ಟರ್** | **ಘಟಕ-1** | **ಘಟಕ-2** | **ಘಟಕ-3** | **ಘಟಕ-4** |
|---|---|---|---|---|
| ಪ್ರಥಮ ಸೆಮಿಸ್ಟರ್ | ಕನ್ನಡ ನಾಡು-ನುಡಿ-ಚಿಂತನೆ | ಆಕಾಶ | ತಾರುಣ್ಯ | ಸಂಕೀರ್ಣ |
| ಐ, 1-1 | 15 ಗಂಟೆಗಳು | 15 ಗಂಟೆಗಳು | 13 ಗಂಟೆಗಳು | 13 ಗಂಟೆಗಳು |
| ದ್ವಿತೀಯ ಸೆಮಿಸ್ಟರ್ | ವಾಣಿಜ್ಯ | ತಂತ್ರಜ್ಞಾನ | ದಾಂಪತ್ಯ | ಸಂಕೀರ್ಣ |
| ಐ, 1-2 | 15 ಗಂಟೆಗಳು | 15 ಗಂಟೆಗಳು | 13 ಗಂಟೆಗಳು | 13 ಗಂಟೆಗಳು |

**ಬಿ.ಕಾಂ-ಕನ್ನಡ ಭಾಷಾ ಪಠ್ಯ**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು 1, 2, 3, 4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52-56 ಗಂಟೆಗಳು)

| **ಸೆಮಿಸ್ಟರ್** | **ಘಟಕ-1** | **ಘಟಕ-2** | **ಘಟಕ-3** | **ಘಟಕ-4** |
|---|---|---|---|---|
| ಪ್ರಥಮ ಸೆಮಿಸ್ಟರ್ | ಕನ್ನಡ ನಾಡು-ನುಡಿ-ಚಿಂತನೆ | ಸಂಸ್ಕೃತಿ | ಜಾಗತೀಕರಣ | ಸಂಕೀರ್ಣ |
| ಐ, 1-1 | 15 ಗಂಟೆಗಳು | 15 ಗಂಟೆಗಳು | 13 ಗಂಟೆಗಳು | 13 ಗಂಟೆಗಳು |
| ದ್ವಿತೀಯ ಸೆಮಿಸ್ಟರ್ | ಸೌಂದರ್ಯ | ಭಕ್ತಿ | ದೇಸಿಯತೆ | ಸಂಕೀರ್ಣ |
| ಐ, 1-2 | 15 ಗಂಟೆಗಳು | 15 ಗಂಟೆಗಳು | 13 ಗಂಟೆಗಳು | 13 ಗಂಟೆಗಳು |

**ಬಿ.ಬಿ.ಎ-ಕನ್ನಡ ಭಾಷಾ ಪಠ್ಯ**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು 1, 2, 3, 4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52-56 ಗಂಟೆಗಳು)

| **ಸೆಮಿಸ್ಟರ್** | **ಘಟಕ-1** | **ಘಟಕ-2** | **ಘಟಕ-3** | **ಘಟಕ-4** |
|---|---|---|---|---|
| ಪ್ರಥಮ ಸೆಮಿಸ್ಟರ್ | ಕನ್ನಡ ನಾಡು-ನುಡಿ-ಚಿಂತನೆ | ಆಧುನಿಕತೆ | ಕುಟುಂಬ | ಸಂಕೀರ್ಣ |
| ಐ, 1-1 | 15 ಗಂಟೆಗಳು | 15 ಗಂಟೆಗಳು | 13 ಗಂಟೆಗಳು | 13 ಗಂಟೆಗಳು |
| ದ್ವಿತೀಯ ಸೆಮಿಸ್ಟರ್ | ಕಾಯಕ | ಸಾಮರಸ್ಯ | ಅಂತಃಕರಣ | ಸಂಕೀರ್ಣ |
| ಐ, 1-2 | 15 ಗಂಟೆಗಳು | 15 ಗಂಟೆಗಳು | 13 ಗಂಟೆಗಳು | 13 ಗಂಟೆಗಳು |

**ಐಚ್ಛಿಕ ಕನ್ನಡ ಪಠ್ಯ ವಿನ್ಯಾಸ**

ಒಂದರಿಂದ ಎರಡನೇ ಸೆಮಿಸ್ಟರ್‌ವರೆಗೆ

| | | |
|---|---|---|
| ಮೊದಲನೇ | ಎ-1 | ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ |
| ಸೆಮಿಸ್ಟರ್ | ಪತ್ರಿಕೆ - 1 | (ಆರಂಭದಿಂದ ಹತ್ತನೇ ಶತಮಾನದವರೆಗೆ) |
| | ಎ-2 | ಮಧ್ಯಕಾಲೀನ ಕನ್ನಡ ಸಾಹಿತ್ಯ ಚರಿತ್ರೆ |
| | ಪತ್ರಿಕೆ - 2 | (ಹನ್ನೊಂದನೇ ಶತಮಾನದಿಂದ ಹದಿನಾರನೇ ಶತಮಾನದವರೆಗೆ) |
| ಎರಡನೇ | ಎ-3 | ಆಧುನಿಕ ಪೂರ್ವ ಕನ್ನಡ ಸಾಹಿತ್ಯ |
| ಸೆಮಿಸ್ಟರ್ | ಪತ್ರಿಕೆ - 1 | (ಹದಿನೇಳನೆಯ ಶತಮಾನದಿಂದ ಹತ್ತೊಂಬತ್ತನೆ ಶತಮಾನದವರೆಗೆ) |
| | ಎ-4 | **ಆಧುನಿಕ ಕನ್ನಡ ಸಾಹಿತ್ಯ - ಪ್ರೇರಣೆಗಳು** |
| | ಪತ್ರಿಕೆ - 1 | (ಇಪ್ಪತ್ತನೆಯ ಶತಮಾನದಿಂದ ಮುಂದೆ) |

**ಮುಕ್ತ ಆಯ್ಕೆ 1 ಮುಕ್ತ ಆಯ್ಕೆ 2 ಪತ್ರಿಕೆಯ ಕನ್ನಡ ಪಠ್ಯ ಚೌಕಟ್ಟು (OE)**

| | | |
|---|---|---|
| ಮೊದಲನೇ ಸೆಮಿಸ್ಟರ್ ಮುಕ್ತ ಆಯ್ಕೆ 1 | (ಔಇ)-1 ಕ್ರೆಡಿಟ್ -03 | ಕನ್ನಡ ಭಾಷೆ ಮತ್ತು ಸಾಹಿತ್ಯ |
| ಎರಡನೇ ಸೆಮಿಸ್ಟರ್ ಮುಕ್ತ ಆಯ್ಕೆ 2 | (ಔಇ)-2 ಕ್ರೆಡಿಟ್ -03 | ಕನ್ನಡ ವ್ಯಾಕರಣ |
| ಮೊದಲನೇ ಸೆಮಿಸ್ಟರ್ ಮುಕ್ತ ಆಯ್ಕೆ 1 | (ಔಇ)-1 ಕ್ರೆಡಿಟ್ -03 | ಆಡಳಿತಾತ್ಮಕ ಕನ್ನಡ ಕಲಿಕೆ |
| ಎರಡನೇ ಸೆಮಿಸ್ಟರ್ ಮುಕ್ತ ಆಯ್ಕೆ 2 | (ಔಇ)-2 ಕ್ರೆಡಿಟ್ -03 | ಕನ್ನಡ ಭಾಷಾಂತರ : ತತ್ತ್ವ ಮತ್ತು ಪ್ರಯೋಗ |
| ಮೂರನೇ ಸೆಮಿಸ್ಟರ್ | (ಔಇ)-3 ಕ್ರೆಡಿಟ್ -03 | ಕನ್ನಡ ಜಾನಪದ ಮತ್ತು ಪ್ರಯೋಗ |
| ನಾಲ್ಕನೇ ಸೆಮಿಸ್ಟರ್ | (ಔಇ)-3 ಕ್ರೆಡಿಟ್ -03 | ಕನ್ನಡ ರಂಗಭೂಮಿ ಮತ್ತು ಪ್ರಯೋಗ |
| | | ಕನ್ನಡ ಸಾಹಿತ್ಯ-ಕರ್ನಾಟಕ-ಸಾಮಾನ್ಯಜ್ಞಾನ |

**ಕನ್ನಡೇತರರಿಗೆ ಕನ್ನಡ**

ಕನ್ನಡ ಕಲಿ - 1 ಪದವಿ ಮೊದಲ ಸೆಮಿಸ್ಟರ್ - ಫಂಕ್ಷನಲ್ ಕನ್ನಡ

ಕನ್ನಡ ಕಲಿ - 2 ಪದವಿ ಎರಡನೇ ಸೆಮಿಸ್ಟರ್

ಆಯಾ ಅಧ್ಯಯನ ಮಂಡಳಿಗಳು ತಮ್ಮ ಆದ್ಯತೆಗೆ ಅನುಗುಣವಾಗಿ ಪಠ್ಯಗಳನ್ನು ರೂಪಿಸಿಕೊಳ್ಳಬಹುದು.

**ಅನುಬಂಧ**

**ರಾಷ್ಟ್ರೀಯ ಶಿಕ್ಷಣ ನೀತಿ - 2020**

**ಕನ್ನಡ ಭಾಷಾ ಸ್ವರೂಪ (ಪ್ರಥಮ ಭಾಷೆ - ಕಡ್ಡಾಯ ಕನ್ನಡ)**

**ಕೋರ್ಸುವಾರು ಕನ್ನಡ ಭಾಷಾ ಪಠ್ಯಕ್ರಮ**

ಶೈಕ್ಷಣಿಕ ವ್ಯವಸ್ಥೆಯಲ್ಲಿ ಭಾಷಾ ಪಠ್ಯಗಳು ಮತ್ತು ಭಾಷಾ ಅಧ್ಯಾಪಕರ ಜವಾಬ್ದಾರಿ ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಹಲವು ಬಗೆಯ ಬಿಕ್ಕಟ್ಟುಗಳು ಮತ್ತು ವಿಷಮತೆಗಳು ಹೆಚ್ಚುತ್ತಿರುವ ಈ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳನ್ನು ಪ್ರಜ್ಞಾವಂತರನ್ನಾಗಿ, ಸಂವೇದನಾಶೀಲರನ್ನಾಗಿ ಮಾಡುವ ಅವಕಾಶ ಭಾಷಾ ಪಠ್ಯಗಳಲ್ಲಿ ಇರುತ್ತದೆ. ಆ ಅವಕಾಶವನ್ನು ಎಂದಿನಿಂದಲೂ ಭಾಷಾ ಪಠ್ಯ ಮಂಡಳಿಗಳು ಆಸ್ಥೆಯಿಂದ ನಿಭಾಯಿಸುತ್ತಲೇ ಬಂದಿವೆ.

ಹೊಸ ಶಿಕ್ಷಣ ನೀತಿಯ ಅನುಷ್ಠಾನದ ಹಿನ್ನೆಲೆಯಲ್ಲಿ ರಚಿಸಲಾದ ಸಮಿತಿಯು ಇದನ್ನೇ ಬುನಾದಿಯಾಗಿಸಿಕೊಂಡು ಪಠ್ಯಕ್ರಮವನ್ನು ಕುರಿತ ನಕಾಶೆಯನ್ನು ರಚಿಸಿದೆ. ಕನ್ನಡವನ್ನು 'ಜ್ಞಾನದ ಭಾಷೆ ' ಯಾಗಿ ವಿದ್ಯಾರ್ಥಿಗಳಿಗೆ ನೀಡಬೇಕೆನ್ನುವುದು ಸಮಿತಿಯ ಆಶಯ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಈ ಅಂಶವನ್ನೇ ಉದ್ಯೋಗ ಮತ್ತು ಕೌಶಲ್ಯಗಳು ಶಿಕ್ಷಣದ ಮುಖ್ಯ ಗುರಿ ಎಂದು ಹೇಳಿದೆ. ಹೀಗಾಗಿ ತಾಯಿ ಭಾಷೆ ಕನ್ನಡದ ಮೂಲಕ ವಿದ್ಯಾರ್ಥಿಗಳು ಸ್ಥಳೀಯ, ರಾಷ್ಟ್ರೀಯ ಜಾಗತೀಯ ಸವಾಲುಗಳನ್ನು ಸನ್ನದ್ಧರಾಗುವ ಬಗೆಯಲ್ಲಿ ಪಠ್ಯಕ್ರಮದ ವಿನ್ಯಾಸವನ್ನು ರೂಪಿಸಲಾಗಿದೆ. ಜಾಗತೀಕರಣವೂ ಸೇರಿದಂತೆ ಹಲವು ವಿದ್ಯಮಾನಗಳು ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶಗಳನ್ನು ಸಮೀಕರಣಗಳನ್ನು, ಗ್ರಹಿಕೆಗಳನ್ನು ಆಳವಾಗಿ ಪ್ರಭಾವಿಸುತ್ತಿವೆ. ಇವು ನಮ್ಮ ಯುವ ತಲೆಮಾರುಗಳನ್ನು ತಮ್ಮ ಬೇರುಗಳಿಂದಲೇ ದೂರ ಮಾಡುತ್ತಾ ಅವರನ್ನು ಪರಕೀಯರನ್ನಾಗಿಸುತ್ತಿದೆ ಎನ್ನುವ ಆತಂಕ ಅಧ್ಯಾಪಕರನ್ನು ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ನಾಡು-ನುಡಿ, ಜಲ, ಭೂಮಿ, ಸಮಕಾಲೀನ ಸವಾಲುಗಳನ್ನು ಕನ್ನಡದ ಅತ್ಯುತ್ತಮ ಪಠ್ಯಗಳ ಮುಖಾಂತರ ಕಲಿಸಬಹುದೆನ್ನುವ ನಂಬಿಕೆ ಈ ಸಮಿತಿಯದ್ದು. ವಿದ್ಯಾರ್ಥಿಗಳಲ್ಲಿ ಸಾಹಿತ್ಯಕ ಅಭಿರುಚಿಯನ್ನು ಹೆಚ್ಚಿಸಬೇಕು. ಭಾಷೆ ಮತ್ತು ಸಾಹಿತ್ಯಗಳನ್ನು ಕುರಿತ ಪ್ರೀತಿಯನ್ನು ಹೆಚ್ಚಿಸಬೇಕು ಎನ್ನುವುದು ಪಠ್ಯಗಳ ಒಂದು ಆಯಾಮವಾದರೆ, ಮತ್ತೊಂದು ಆಯಾಮವು ನಮ್ಮ ಸಮೃದ್ಧ ಸಾಂಸ್ಕೃತಿಕ, ಸಾಹಿತ್ಯಕ ಪರಂಪರೆಯ ಅರಿವೂ ಅವರಲ್ಲಿ ಮೂಡಬೇಕೆನ್ನುವುದು. ಎರಡು ವರ್ಷಗಳ ಪಠ್ಯಗಳಲ್ಲಿ ಅವರಲ್ಲಿ ನಾಗರಿಕ ವ್ಯಕ್ತಿತ್ವದ ಧಾತುಗಳನ್ನು ತುಂಬಬೇಕು. ಸಾಹಿತ್ಯದ ಅಂತಃಕರಣ ಮತ್ತು ಸಾಮಾಜಿಕ ವ್ಯಕ್ತಿತ್ವದ ಬೌದ್ಧಿಕ ಅರಿವು ಅವರಲ್ಲಿ ಸಮನಾಗಿ ಬೆಳೆಯುತ್ತಾ ಹೋಗಬೇಕು. ಇವುಗಳಲ್ಲದೆ ಕನ್ನಡವು ಅವರ ವೃತಿಯ ದಾರಿಯೂ ಆಗಬೇಕು. ಹಲವು ವೃತ್ತಿಗಳನ್ನು ಅವರು ಆರಿಸಿಕೊಳ್ಳಲು ಅನುವಾಗುವ ಪಠ್ಯಕ್ರಮವೂ ಸೇರಬೇಕು. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಮಿತಿಯು 'ವಿಷಯಾಧಾರಿತ ಪಠ್ಯ ' ವನ್ನು ರೂಪಿಸಿದೆ.

ಯಾವುದೇ ಕೋರ್ಸಿನ ಮೊದಲ ಸೆಮಿಸ್ಟರ್‌ನ ಮೊದಲ ಭಾಗವಾಗಿ (ನಾಲ್ಕು ಭಾಗಗಳಲ್ಲಿ) ಕನ್ನಡ ನಾಡು-ನುಡಿಯನ್ನು ಕುರಿತ ಭಾಗವು ಕಡ್ಡಾಯವಾಗಿ ಇರಬೇಕು. ಕನ್ನಡ ನಾಡು ರೂಪುಗೊಂಡದ್ದರಿಂದ ಪ್ರಾರಂಭಿಸಿ ಅದರ ಶ್ರೀಮಂತಿಕೆ, ವೈಶಿಷ್ಟ್ಯತೆ, ಅದರ ಲೋಕದೃಷ್ಟಿ, ಕಲಾ ಪ್ರಕಾರಗಳಲ್ಲಿನ ಸಮೃದ್ಧತೆ, ರಾಜಕೀಯ ಸಾಮಾಜಿಕ ಚಿಂತನೆಗಳ ಸ್ವೋಪಜ್ಞತೆ, ಅದರ ಭೌಗೋಳಿಕ ಸೌಂದರ್ಯ, ವಿವಿಧ ಕ್ಷೇತ್ರಗಳಲ್ಲಿನ ಸಾಧಕರು, ಮಹತ್ತ್ವದ ಚಳುವಳಿಗಳು, ಭಾರತ ಮತ್ತು ವಿಶ್ವಕ್ಕೆ ಕನ್ನಡದ ಕೊಡುಗೆಗಳು ಇವುಗಳಲ್ಲಿ ಕೆಲವನ್ನು ಆಯ್ದು ಆಯಾ ವಿಶ್ವವಿದ್ಯಾನಿಲಯಗಳ ಅಧ್ಯಯನ ಮಂಡಳಿಗಳು ಪಠ್ಯಕ್ರಮವನ್ನು ರೂಪಿಸಿಕೊಳ್ಳಬಹುದಾಗಿದೆ. ನಾಲ್ಕರಲ್ಲಿ ಕೊನೆಯ ಭಾಗವನ್ನು ಕಡ್ಡಾಯವಾಗಿ ಸಂಕೀರ್ಣ/ ತಾಂತ್ರಿಕ / ವೃತ್ತಿ ತರಬೇತಿ ಆಶಯದ / ವೃತ್ತಿ ನೈಪುಣ್ಯತೆ / ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕವಾದ... ಹೀಗೆ ಇದು ಆಯಾ ವಿಶ್ವವಿದ್ಯಾನಿಲಯಗಳ ಅಧ್ಯಯನ ಮಂಡಳಿಗಳ ತೀರ್ಮಾನಕ್ಕೆ ಬಿಡಲಾಗಿದೆ.

ಇದಕ್ಕೆ ಪೂರಕವಾಗಿ ಹಲವು ವಿಷಯಗಳನ್ನು ಸಮಿತಿಯು ಆಯ್ಕೆ ಮಾಡಿದೆ. ಸದ್ಯಕ್ಕೆ ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್‌ಗಳಿಗೆ ಇವುಗಳನ್ನು ಆರಿಸಲಾಗಿದ್ದು, ಆಯಾ ಘಟಕಗಳ ಆಶಯಕ್ಕೆ ಅನುಗುಣವಾಗಿ ಅಧ್ಯಯನ ಮಂಡಳಿಗಳು ಪಠ್ಯಗಳನ್ನು ಬೇರೆ ಬೇರೆ

ಮೂಲಗಳಿಂದ ಮತ್ತು ಇಲ್ಲದೆ ಇರುವ ಹೊಸ ಆಯಾಮಗಳನ್ನು ಸೇರಿಸಿಕೊಳ್ಳಬಹುದು. ಕನ್ನಡೇತರರಿಗೆ ಕನ್ನಡ ಕಲಿ ಪತ್ರಿಕೆಗಳನ್ನು ಕನ್ನಡ ಅಧ್ಯಾಪಕರೇ ಬೋಧಿಸಬೇಕು.

ಮುಂದಿನ ದಿನಗಳಲ್ಲಿ ಮೂರು ಮತ್ತು ನಾಲ್ಕನೆಯ ಸೆಮಿಸ್ಟರ್‌ನ ಪಠ್ಯಗಳ ರೂಪುರೇಷೆಗಳನ್ನು ತಿಳಿಸಲಾಗುವುದು.

**ಪಠ್ಯಕ್ರಮಗಳನ್ನು ಕುರಿತು ಕೆಲವು ಸಲಹೆ ಸೂಚನೆಗಳು**

1. ಪ್ರತಿ ಪದವಿ ಕ್ರಮಕ್ಕೂ ಪ್ರತ್ಯೇಕ ಪಠ್ಯಗಳನ್ನು ರೂಪಿಸಬೇಕು.
2. ಪ್ರತಿ ಸೆಮಿಸ್ಟರ್‌ಗೆ ನಾಲ್ಕು ಗಂಟೆಗಳ ಬೋಧನಾ ಅವಧಿ ಕಡ್ಡಾಯವಾಗಿರಬೇಕು.
3. ಪಠ್ಯಗಳ ಆಶಯಗಳನ್ನು ಕುರಿತ ಆರಂಭಿಕ ಟಿಪ್ಪಣಿ ಇರಬೇಕು.
4. ಎರಡು ಸೆಮಿಸ್ಟರ್‌ಗಳನ್ನು ಸೇರಿಸಿ ಒಂದೊಂದು ಪಠ್ಯಪುಸ್ತಕವನ್ನು ಮಾಡುವುದು.
5. ಪ್ರತಿ ಸೆಮಿಸ್ಟರ್‌ನ ಪಠ್ಯಕ್ರಮದಲ್ಲಿ ನಾಲ್ಕು ಘಟಕಗಳು ಹಾಗೂ ಪ್ರತಿ ಘಟಕದಲ್ಲಿ ಮೂರು ಮೂರು ಅಧ್ಯಾಯಗಳು ಇರಬೇಕು.
6. ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳು (ಅನುವಾದ, ಜಾನಪದ, ಮಹಿಳಾ ಮತ್ತು ಅಲಕ್ಷಿತ ಸಮುದಾಯ, ಅಲ್ಪಸಂಖ್ಯಾತ ವರ್ಗಗಳು) ಸೇರಿದಂತೆ ಒಳಗೊಳ್ಳುವಂತೆ ಅಧ್ಯಯನ ಮಂಡಳಿಯು ಕಾಳಜಿ ವಹಿಸಬೇಕು.
7. ಕಡ್ಡಾಯ ಕನ್ನಡ ಭಾಷಾ ಪಠ್ಯಕ್ರಮ ವಿನ್ಯಾಸದಲ್ಲಿ ನಾಲ್ಕನೆಯ ಘಟಕದಲ್ಲಿ (ಸಂಕೀರ್ಣ) ಶೀರ್ಷಿಕೆಯನ್ನೂ ಒಳಗೊಂಡಂತೆ ಪಠ್ಯಕ್ರಮವನ್ನು ರೂಪಿಸುವುದನ್ನು ಅಧ್ಯಯನ ಮಂಡಳಿಗಳ ತೀರ್ಮಾನಕ್ಕೆ ಬಿಡಲಾಗಿದೆ. ವೃತ್ತಿಪರ, ತಾಂತ್ರಿಕ ತರಬೇತಿ, ಕೌಶಲ್ಯಾಧಾರಿತ ಮತ್ತು ಸೃಜನಶೀಲ ಚಟುವಟಿಕೆ ಹೀಗೆ ಆಯಾ ಪದವಿ ಕ್ರಮಗಳಿಗೆ ಪೂರಕವಾಗುವಂತೆ ಪಠ್ಯಕ್ರಮವನ್ನು ರೂಪಿಸಬೇಕು.
8. ವಿದ್ಯಾರ್ಥಿಗಳ ಸೃಜನಶೀಲತೆ, ಭಾಷಾ ನೈಪುಣ್ಯ, ಬರೆಹ ಕೌಶಲ್ಯ, ವಿಶ್ಲೇಷಣಾ ಸಾಮರ್ಥ್ಯ, ಸಮಕಾಲೀನಗೊಳಿಸುವಿಕೆ ಮತ್ತು ಅನುವಾದ ಸಾಮರ್ಥ್ಯಗಳನ್ನು ಹೆಚ್ಚಿಸುವುದನ್ನು ಗಮನದಲ್ಲಿಟ್ಟುಕೊಂಡು ನಿಯೋಜಿತ ಕಾರ್ಯ, ಸಾಹಿತ್ಯಕ ಕಾರ್ಯಕ್ರಮ ಇತ್ಯಾದಿಗಳನ್ನು ಆಯೋಜಿಸಬೇಕು.
9. ಪಠ್ಯ ಮತ್ತು ಪಠ್ಯೇತರ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ವೃತ್ತಿಪರ ತಿಳುವಳಿಕೆಯನ್ನು ನೀಡುವುದರ ಜೊತೆಗೆ ಅವರ ಸಮಗ್ರ ವ್ಯಕ್ತಿತ್ವವನ್ನು ವೃತ್ತಿಪರವಾಗಿ ಸಜ್ಜುಗೊಳಿಸಲು ಅನುಕೂಲವಾಗುವಂತೆ ಇರಬೇಕು. ಇದನ್ನು ಅಧ್ಯಯನ ಮಂಡಳಿ ಹಾಗೂ ಬೋಧಕರು ಗಮನದಲ್ಲಿಟ್ಟುಕೊಳ್ಳಬೇಕು.
10. ಪೂರಕ ಪಠ್ಯಗಳಾಗಿ ದೃಶ್ಯ ಹಾಗೂ ಶ್ರವ್ಯ ಮಾಧ್ಯಮಗಳನ್ನು ಅವಶ್ಯವಾಗಿ ಬಳಸಿಕೊಳ್ಳಬೇಕು.
11. ಶಿಕ್ಷಣ ಸಂಸ್ಥೆಗಳಲ್ಲಿ ಭಾಷಾ ಪ್ರಯೋಗಾಲಯ ಇರುವುದು ಅಪೇಕ್ಷಣೀಯ. ಇದರ ಮೂಲಕ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಕಲಿಕೆಯೂ ಸೇರಿದಂತೆ ಇತರ ತಾಂತ್ರಿಕ ಕಲಿಕೆಗಳನ್ನು ತಿಳಿಸಿಕೊಡಬಹುದು. (ಕನ್ನಡದಲ್ಲಿ ವರದಿ ಬರೆಯುವುದು, ಅನುವಾದ ಮಾಡುವುದು ಇತ್ಯಾದಿ)
12. ಭಾಷಾ ಪಠ್ಯ ವಿನ್ಯಾಸದಲ್ಲಿ ನೀಡಲಾಗಿರುವ ಪರಾಮರ್ಶನ ಪಠ್ಯಗಳು ಅಂತಿಮವಲ್ಲ. ಅವು ಪ್ರಾತಿನಿಧಿಕ ಮತ್ತು ಮಾದರಿ ಮಾತ್ರ ಅಂತಿಮವಾಗಿ ಆಯ್ಕೆಯು ಆಯಾ ಅಧ್ಯಯನ ಮಂಡಳಿಗಳ ವಿವೇಚನಾಧಿಕಾರಕ್ಕೆ ಬಿಟ್ಟದ್ದು.
13. ಪ್ರತಿ ಪಠ್ಯದಲ್ಲೂ ಪ್ರತಿ ಘಟಕದ ವಿಷಯವನ್ನು ಕುರಿತ ಟಿಪ್ಪಣಿ ಇರಬೇಕು.
14. ಪಠ್ಯದ ಕೊನೆಯಲ್ಲಿ ಪೂರಕ ಪಠ್ಯಗಳ ಪಟ್ಟಿಯನ್ನು ಕೊಡಬೇಕು. ಪೂರಕ ಪಠ್ಯವನ್ನೂ ನೀಡಬಹುದು. ಪಠ್ಯದ ಮೊದಲು ಆಶಯ ಪಠ್ಯವನ್ನೂ ಸೇರಿಸಬಹುದು.
15. ಭಾಷಾಭ್ಯಾಸದಲ್ಲಿ ವಿದ್ಯಾರ್ಥಿಗಳ ಸ್ವಂತಿಕೆಗೆ ಅವಕಾಶ ಇರಬೇಕು.
16. ಮುಕ್ತ ಆಯ್ಕೆ (ಓಪನ್ ಇಲೆಕ್ಟಿವ್ಸ್) ಪತ್ರಿಕೆಗಳನ್ನು ವಿದ್ಯಾರ್ಥಿಗಳ ವೃತ್ತಿಪರತೆಯನ್ನು ಹೆಚ್ಚಿಸುವ ಸಲುವಾಗಿ ರೂಪಿಸಲಾಗಿದ್ದು, ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೂ ಈ ವಿಷಯಗಳ ಮಹತ್ತ್ವವನ್ನು ಕುರಿತು ಮನವರಿಕೆ ಮಾಡಿಕೊಡಬೇಕು.

17. ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾನಿಲಯದ ಅಧ್ಯಯನ ಮಂಡಳಿ ನಿರ್ಧರಿಸುವುದು. 1, 2, 3, 4 ಸೆಮಿಸ್ಟರ್‌ಗಳು.

# ಪ್ರಥಮ ಬಿ.ಎ. ಕನ್ನಡ ಐಚ್ಛಿಕ

ಮೊದಲ ಚತುರ್ಮಾಸ

# ಸಾಹಿತ್ಯ ಮಂಗಳ -1 (ಎ 1)

ಪ್ರಧಾನ ಸಂಪಾದಕರು : **ಪ್ರೊ. ಸೋಮಣ್ಣ**

ಕಾರ್ಯನಿರ್ವಾಹಕ ಸಂಪಾದಕರು : **ಡಾ. ಮಾಧವ ಎಂ.ಕೆ.**

ಸಂಪಾದಕರು : **ಡಾ. ಹೆಚ್.ಜಿ. ಶ್ರೀಧರ, ಡಾ. ಸುಬ್ರಹ್ಮಣ್ಯ ಭಟ್, ಶ್ರೀಮತಿ ಗೀತಾ ಕುಮಾರಿ**

| Sl. No. | Course Code | Title of the Course | Category of Courses | Teaching Hours per week (L+T+P) | SEE | CIE | Total Marks | Credits |
|---|---|---|---|---|---|---|---|---|
| 1. | ಸಾಹಿತ್ಯ ಮಂಗಳ ಮೊದಲನೆ ಚತುರ್ಮಾಸ | ಪತ್ರಿಕೆ - ಎ1 ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ | | 2+1+0 | 60 | 40 | 100 | 6 |

## NEP ರಾಷ್ಟ್ರೀಯ ಶಿಕ್ಷಣ ನೀತಿ - 2020ರ ಅನ್ವಯ

**ಮಂಗಳೂರು ವಿಶ್ವವಿದ್ಯಾನಿಲಯ**

# ಪ್ರಥಮ ಬಿ.ಎ. ಕನ್ನಡ ಐಚ್ಛಿಕ

ಮೊದಲ ಚತುರ್ಮಾಸ

## ಸಾಹಿತ್ಯ ಮಂಗಳ - 1 (ಎ 1)

ಮೊದಲ ಚತುರ್ಮಾಸ

ಒಟ್ಟು ಕ್ರೆಡಿಟ್‌ಗಳು 3, ಬೋಧನಾ ಅವಧಿ 4+0+0,
ಸೆಮಿಸ್ಟರ್‌ನಲ್ಲಿ ಒಟ್ಟು 100 ಅಂಕಗಳು

SEE - ಸೆಮಿಸ್ಟರ್ ಅಂತ್ಯದ ಪರೀಕ್ಷೆ - 60 ಅಂಕಗಳು

CIE - ನಿರಂತರ ಆಂತರಿಕ ಮೌಲ್ಯಮಾಪನ - 40 ಅಂಕಗಳು

## ಪರಿವಿಡಿ

**ಪತ್ರಿಕೆ ಎ-1 (ವಾರಕ್ಕೆ 3 ಗಂಟೆ; ಸೆಮಿಸ್ಟರ್ 36 ಗಂಟೆಗಳು; 60 ಅಂಕಗಳು)**

**1. ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ : 30 ಅಂಕಗಳು (16 ಗಂಟೆಗಳು)**

**ಅ. ಕನ್ನಡ ಸಾಹಿತ್ಯ ಚರಿತ್ರೆಯ ಸ್ಥೂಲ ಪರಿಚಯ : (5 ಗಂಟೆ)**

ಕನ್ನಡ ಭಾಷೆಯ ಪ್ರಾಚೀನತೆ

ಕನ್ನಡ ಸಾಹಿತ್ಯ ಚರಿತ್ರೆಯ ವಿಭಾಗ ಕ್ರಮ

ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಸಾಹಿತ್ಯದ ಪರಿಚಯ

ಹೊಸಗನ್ನಡ ಕಾಲಘಟ್ಟದ ಪರಿಚಯ : ನವೋದಯ, ನವ್ಯ, ದಲಿತ, ಬಂಡಾಯ ಸಾಹಿತ್ಯದ ಪರಿಚಯ

**ಆ. ಪೂರ್ವದ ಹಳಗನ್ನಡ : (4 ಗಂಟೆ)**

ಶಾಸನ ಸಾಹಿತ್ಯದ ಪರಿಚಯ - ಗದ್ಯಕವಿಗಳು - ಪದ್ಯಕವಿಗಳ ಪರಿಚಯ

ಕವಿರಾಜ ಮಾರ್ಗದ ಪರಿಚಯ

**ಇ. ಹಳಗನ್ನಡ : ಹಳಗನ್ನಡ ಸಾಹಿತ್ಯದ ಸ್ವರೂಪ : (5 ಗಂಟೆ)**

ಚಂಪೂ ಎಂದರೇನು - ಚಂಪೂ ಕವಿಗಳು : ಪಂಪ-ಪೊನ್ನ-ರನ್ನ-ಮೊದಲನೆಯ ನಾಗವರ್ಮ-ಎರಡನೆಯ ನಾಗವರ್ಮ - ನಾಗಚಂದ್ರ-ನಯಸೇನ ಇತರರು

ಗದ್ಯಕೃತಿಗಳು : ವಡ್ಡಾರಾಧನೆ - ಪಂಚತಂತ್ರ (2 ಗಂಟೆ)

**2. ಪಠ್ಯಗಳು : 30 ಅಂಕಗಳು (20 ಗಂಟೆಗಳು)**

**ಅ. ಎರಡು ಶಾಸನಗಳು**

ಹಲ್ಮಿಡಿ ಶಾಸನ (ಪೂರ್ವದ ಹಳಗನ್ನಡ -2 ಗಂಟೆ)

ಅತ್ತಿಮಬ್ಬೆಯ ಶಾಸನ (ಹಳಗನ್ನಡ - 2ಗಂಟೆ)

**ಆ. ಕವಿರಾಜ ಮಾರ್ಗದ ಪದ್ಯಗಳು (5 ಗಂಟೆ)**

ನಾಡು : 1-36, 37

ನುಡಿ : 1-46, 48, 75

ಪ್ರಾಚೀನ ಕವಿ : 1-29, 32

ಸಾಹಿತ್ಯ ರೂಪ : 1-27, 32, 34, 35, 68

ಕನ್ನಡ ಜನಪದ : 1-38, 2-28

**ಇ. ವಡ್ಡಾರಾಧನೆಯ ಕಥೆ : (4 ಗಂಟೆ)**

ಚಾಣಕ್ಯ ರಿಸಿಯ ಕಥೆ

**ಈ. ಪಂಪನ ಕಾವ್ಯ ಭಾಗ : ಸೂಳ್ಪಡೆಯಲಪ್ಪುದು ಕಾಣಾ : (6 ಗಂಟೆ)**

10ನೆಯ ಆಶ್ವಾಸ ಪದ್ಯ 15ರ ವಚನದಿಂದ ತೊಡಗಿ 25ನೆಯ ಪದ್ಯದವರೆಗೆ

## ಪ್ರಶ್ನೆ ಪತ್ರಿಕೆ ಮಾದರಿ

**ಅಂಕಗಳು 60**

**ಚರಿತ್ರೆಯ ಭಾಗದಿಂದ 30 ಅಂಕಗಳು**

**1. 8x2=16 ಅಂಕಗಳು**

**2. 5x2=10 ಅಂಕಗಳು (ಟಿಪ್ಪಣಿ)**

**3. 1x4=4 ಅಂಕಗಳು**

**ಪಠ್ಯ ಭಾಗದಿಂದ 30 ಅಂಕಗಳು**

**4. 8x2=16 ಅಂಕಗಳು**

**5. 3x2=6 ಅಂಕಗಳು (ಟಿಪ್ಪಣಿ)**

**6. 1x5=5 ಅಂಕಗಳು (ಭಾವಾರ್ಥ)**

**7. 1x3=3 ಅಂಕಗಳು**

ಪ್ರಧಾನ ಸಂಪಾದಕರು : **ಪ್ರೊ. ಸೋಮಣ್ಣ**

ಕಾರ್ಯನಿರ್ವಾಹಕ ಸಂಪಾದಕರು : **ಡಾ. ಮಾಧವ ಎಂ.ಕೆ.**

ಸಂಪಾದಕರು : **ಡಾ. ಹೆಚ್.ಜಿ. ಶ್ರೀಧರ, ಡಾ. ಸುಬ್ರಹ್ಮಣ್ಯ ಭಟ್, ಶ್ರೀಮತಿ ಗೀತಾ ಕುಮಾರಿ**

# ಪ್ರಥಮ ಬಿ.ಎ. ಕನ್ನಡ ಐಚ್ಛಿಕ

ಮೊದಲ ಚತುರ್ಮಾಸ

## ಸಾಹಿತ್ಯ ಮಂಗಳ -1 (ಎ 2)

ಪ್ರಧಾನ ಸಂಪಾದಕರು : **ಪ್ರೊ. ಸೋಮಣ್ಣ**

ಕಾರ್ಯನಿವಾರ್ಹಕ ಸಂಪಾದಕರು : **ಡಾ. ಮಾಧವ ಎಂ.ಕೆ.**

ಸಂಪಾದಕರು : **ಡಾ. ಹೆಚ್.ಜಿ. ಶ್ರೀಧರ, ಡಾ. ಸುಬ್ರಹ್ಮಣ್ಯ ಭಟ್, ಶ್ರೀಮತಿ ಗೀತಾ ಕುಮಾರಿ**

| Sl. No. | Course Code | Title of the Course | Category of Courses | Teaching Hours per week (L+T+P) | SEE | CIE | Total Marks | Credits |
|---|---|---|---|---|---|---|---|---|
| 1. | ಸಾಹಿತ್ಯ ಮಂಗಳ ಮೊದಲನೆ ಚತುರ್ಮಾಸ | ಪತ್ರಿಕೆ - ಎ2 ಮಧ್ಯಕಾಲೀನ ಕನ್ನಡ ಸಾಹಿತ್ಯ ಚರಿತ್ರೆ | | 2+1+0 | 60 | 40 | 100 | 6 |

**NEP ರಾಷ್ಟ್ರೀಯ ಶಿಕ್ಷಣ ನೀತಿ - 2020ರ ಅನ್ವಯ**

**ಮಂಗಳೂರು ವಿಶ್ವವಿದ್ಯಾನಿಲಯ**

# ಪ್ರಥಮ ಬಿ.ಎ. ಕನ್ನಡ ಐಚ್ಛಿಕ

ಮೊದಲ ಚತುರ್ಮಾಸ

# ಸಾಹಿತ್ಯ ಮಂಗಳ - 1 (ಎ2)

ಮೊದಲ ಚತುರ್ಮಾಸ

ಒಟ್ಟು ಕ್ರೆಡಿಟ್‌ಗಳು 3, ಬೋಧನಾ ಅವಧಿ 4+0+0,

ಸೆಮಿಸ್ಟರ್‌ನಲ್ಲಿ ಒಟ್ಟು 100 ಅಂಕಗಳು

SEE - ಸೆಮಿಸ್ಟರ್ ಅಂತ್ಯದ ಪರೀಕ್ಷೆ - 60 ಅಂಕಗಳು

CIE - ನಿರಂತರ ಆಂತರಿಕ ಮೌಲ್ಯಮಾಪನ - 40 ಅಂಕಗಳು

## ಪರಿವಿಡಿ

**ಪತ್ರಿಕೆ ಎ-2 (ವಾರಕ್ಕೆ 3 ಗಂಟೆ; ಸೆಮಿಸ್ಟರ್ 36 ಗಂಟೆಗಳು; 60 ಅಂಕಗಳು)**

**1. ಮಧ್ಯಕಾಲೀನ ಕನ್ನಡ ಸಾಹಿತ್ಯ ಚರಿತ್ರೆ : 30 ಅಂಕಗಳು (16 ಗಂಟೆಗಳು)**

**ಅ. ಮಧ್ಯಕಾಲೀನ ಕನ್ನಡ ಸಾಹಿತ್ಯ ಚರಿತ್ರೆಯ ಗುಣಲಕ್ಷಣಗಳು : (3 ಗಂಟೆ)**

ಪ್ರೇರಣೆ ಪ್ರಭಾವಗಳು - ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಚಾರಿತ್ರಿಕ ಕಾರಣಗಳು

**ಆ. ಮಧ್ಯಕಾಲೀನ ಕನ್ನಡ ಸಾಹಿತ್ಯದ ರೂಪಗಳು**

ವಚನ-ರಗಳೆ-ಷಟ್ಪದಿ-ಕೀರ್ತನೆ-ಸಾಂಗತ್ಯ-ತ್ರಿಪದಿ (3 ಗಂಟೆ)

**ಇ. ಪ್ರಮುಖ ಕವಿಗಳು (10 ಗಂಟೆ)**

ವಚನ : ಜೇಡರ ದಾಸಿಮಯ್ಯ-ಬಸವಣ್ಣ-ಅಲ್ಲಮಪ್ರಭು-ಅಕ್ಕಮಹಾದೇವಿ ಮತ್ತು ಇತರರು

ರಗಳೆ : ಹರಿಹರ

ಷಟ್ಪದಿ : ರಾಘವಾಂಕ-ಕುಮಾರವ್ಯಾಸ-ಚಾಮರಸ - ಲಕ್ಷ್ಮೀಶ ಮತ್ತು ಇತರರು

ಕೀರ್ತನೆ: ವ್ಯಾಸರಾಯ - ವಾದಿರಾಜ-ಪುರಂದರ ದಾಸರು - ಕನಕದಾಸರು ಮತ್ತು ಇತರರು

ಸಾಂಗತ್ಯ : ನಂಜುಂಡಕವಿ - ರತ್ನಾಕರವರ್ಣಿ-ಸಂಚಿಯ ಹೊನ್ನಮ್ಮ

ತ್ರಿಪದಿ - ಸರ್ವಜ್ಞ

**2. ಪಠ್ಯಗಳು (20 ಗಂಟೆ)**

**ವಚನ : (ವಚನ ಕಮ್ಮಟ ಕೃತಿಯಿಂದ) (4 ಗಂಟೆ)**

ದಾಸಿಮಯ್ಯ : 34, 40, 41, 52, 51

ಬಸವಣ್ಣ : 160, 166, 169, 175

ಅಲ್ಲಮ : 61, 62, 72, 81

ಅಕ್ಕಮಹಾದೇವಿ : 275, 281, 312, 289

**ರಗಳೆ** : ಹರಿಹರನ ಪ್ರಭುದೇವರ ರಗಳೆ (3 ಗಂಟೆ)

**ಕೀರ್ತನೆ** : (3 ಗಂಟೆ)

ಸಕಲೇಶ ಮಾದರಸ - 1 (ತಂಗಾಳಿಗಲಿರು ಮರನೆ)

ವ್ಯಾಸರಾಯರು - 1

ಪುರಂದರ ದಾಸರು - 1 (ಗಿಳಿಯ ಪಂಜರದೊಳಿಲ್ಲ)

ಕನಕದಾಸರು - 1 (ಕುಲ ಕುಲವೆಂದು)

**ಷಟ್ಪದಿ ಕಾವ್ಯ ಭಾಗಗಳು (6 ಗಂಟೆ)**

ಕುಮಾರವ್ಯಾಸ - ನಿನ್ನಯ ವೀರರೈವರ ನೋಯಿಸೆನು (ಉದ್ಯೋಗ ಪರ್ವ 10ನೆಯ ಸಂಧಿ)

ತೊರವೆ ನರಹರಿ ಕುಂಭಕರ್ಣನನ್ನು ಎಬ್ಬಿಸುವ ಸೌರಂಭ

**ಸಾಂಗತ್ಯ :** ಹೆಳವನಕಟ್ಟೆ ಗಿರಿಯಮ್ಮನ ಚಂದ್ರಹಾಸ ಚರಿತ್ರೆಯ ಕಾವ್ಯ ಭಾಗ (2 ಗಂಟೆ)

ವಿಷಯೆ - ಚಂದ್ರಹಾಸನ ಭೇಟಿ)

**ತ್ರಿಪದಿ** : ಸರ್ವಜ್ಞ 10 ಪದ್ಯ (2 ಗಂಟೆ)

**ಪ್ರಶ್ನೆ ಪತ್ರಿಕೆ ಮಾದರಿ.**

**ಅಂಕಗಳು 60**

**ಚರಿತ್ರೆಯ ಭಾಗದಿಂದ 30 ಅಂಕಗಳು**

**1. 8×2=16 ಅಂಕಗಳು (ಆಂತರಿಕ ಆಯ್ಕೆಯ ಒಟ್ಟು 4 ಪ್ರಶ್ನೆಗಳು. ಎರಡಕ್ಕೆ ಉತ್ತರಿಸುವಂತೆ)**

**2. 5×2=10 ಅಂಕಗಳು (ಟಿಪ್ಪಣಿ ಮಾದರಿಯ ಆಂತರಿಕ ಆಯ್ಕೆ. ಒಟ್ಟು ನಾಲ್ಕು ಪ್ರಶ್ನೆಗಳು)**

**3. 1×4=4 (ಒಂದು ಅಂಕದ ನಾಲ್ಕು ಪ್ರಶ್ನೆಗಳು)**

**ಪಠ್ಯ ಭಾಗದಿಂದ 30 ಅಂಕಗಳು**

**4. 8×2=16 ಅಂಕಗಳು (ಆಂತರಿಕ ಆಯ್ಕೆಯ ಒಟ್ಟು 4 ಪ್ರಶ್ನೆಗಳು. ಎರಡಕ್ಕೆ ಉತ್ತರಿಸುವಂತೆ)**

**5. 3×2=6 ಅಂಕಗಳು (ಟಿಪ್ಪಣಿ ಮಾದರಿಯ ಆಂತರಿಕ ಆಯ್ಕೆ. ಒಟ್ಟು ನಾಲ್ಕು ಪ್ರಶ್ನೆಗಳು)**

**6. 1×5=5 (ಭಾವಾರ್ಥ. ಎರಡರಲ್ಲಿ ಒಂದಕ್ಕೆ)**

**7. 1×3=3 (ಒಂದು ಅಂಕದ ಮೂರು ಪ್ರಶ್ನೆಗಳು)**

ಪ್ರಧಾನ ಸಂಪಾದಕರು : **ಪ್ರೊ. ಸೋಮಣ್ಣ**

ಕಾರ್ಯನಿರ್ವಾಹಕ ಸಂಪಾದಕರು : **ಡಾ. ಮಾಧವ ಎಂ.ಕೆ.**

ಸಂಪಾದಕರು : **ಡಾ. ಹೆಚ್.ಜಿ. ಶ್ರೀಧರ, ಡಾ. ಸುಬ್ರಹ್ಮಣ್ಯ ಭಟ್, ಶ್ರೀಮತಿ ಗೀತಾ ಕುಮಾರಿ**

# ಪ್ರಥಮ ಬಿ.ಎ. ಕನ್ನಡ ಐಚ್ಛಿಕ

ಎರಡನೆ ಚತುರ್ಮಾಸ

## ಸಾಹಿತ್ಯ ಮಂಗಳ -2 (ಎ 3)

ಪ್ರಧಾನ ಸಂಪಾದಕರು : **ಪ್ರೊ. ಸೋಮಣ್ಣ**

ಕಾರ್ಯನಿರ್ವಾಹಕ ಸಂಪಾದಕರು : **ಡಾ. ಮಾಧವ ಎಂ.ಕೆ.**

ಸಂಪಾದಕರು : **ಡಾ. ಹೆಚ್.ಜಿ. ಶ್ರೀಧರ, ಡಾ. ಸುಬ್ರಹ್ಮಣ್ಯ ಭಟ್, ಶ್ರೀಮತಿ ಗೀತಾ ಕುಮಾರಿ**

| Sl. No. | Course Code | Title of the Course | Category of Courses | Teaching Hours per week (L+T+P) | SEE | CIE | Total Marks | Credits |
|---|---|---|---|---|---|---|---|---|
| 1. | ಸಾಹಿತ್ಯ ಮಂಗಳ ಎರಡನೆ ಚತುರ್ಮಾಸ | ಪತ್ರಿಕೆ - ಎ3 ಆಧುನಿಕ ಪೂರ್ವ ಕನ್ನಡ ಸಾಹಿತ್ಯ | | 2+1+0 | 60 | 40 | 100 | 6 |

**ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನ್ವಯ**

**ಪ್ರಥಮ ಬಿ.ಎ. ಕನ್ನಡ ಐಚ್ಛಿಕ**

**ದ್ವಿತೀಯ ಚತುರ್ಮಾಸ ಪಠ್ಯಗಳು**

## ಸಾಹಿತ್ಯ ಮಂಗಳ - 2 (ಎ3)

## ಪರಿವಿಡಿ

**ಪತ್ರಿಕೆ ಎ - 3 (ವಾರಕ್ಕೆ 3 ಗಂಟೆಗಳು; ಸೆಮಿಸ್ಟರ್ 36 ಗಂಟೆಗಳು; 60 ಅಂಕಗಳು)**

ಪತ್ರಿಕೆಯ ಶೀರ್ಷಿಕೆ: ಆಧುನಿಕ ಪೂರ್ವ ಕನ್ನಡ ಸಾಹಿತ್ಯ-ಆರಂಭ ಮತ್ತು ಪ್ರೇರಣೆಗಳು

**ಘಟಕ - 1 : ಸಾಹಿತ್ಯ ಚರಿತ್ರೆ : 30 ಅಂಕಗಳು - 18 ಗಂಟೆಗಳು**

1. ತತ್ತ್ವಪದಕಾರರು - ಆಧುನಿಕ ಗದ್ಯದ ವಿಕಾಸ
2. ಪ್ರೇರಣೆಗಳು : ಇಂಗ್ಲಿಷ್ ವಿದ್ಯಾಭ್ಯಾಸ, ಸುಧಾರಣಾವಾದಿ ಚಳುವಳಿ
   (ರಾಜಾರಾಮ್ ಮೋಹನ್ ರಾಯ್, ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ)
3. ಮುದ್ರಣ ಸೌಲಭ್ಯ, ಮಿಶನರಿಗಳ ಕೊಡುಗೆ

(ಮೊಗ್ಲಿಂಗ್, ಕಿಟ್ಟೆಲ್, ಬಿ. ಎಲ್. ರೈಸ್)

4. ರಾಷ್ಟ್ರೀಯ ಚಳುವಳಿ

**ಘಟಕ - 2 : ಸಾಹಿತ್ಯ ರೂಪಗಳು**

5. ಕಾವ್ಯ : ಮುದ್ದಣ, ಪಂಜೆ, ಎಸ್.ಜಿ. ನರಸಿಂಹಾಚಾರ್, ಹಟ್ಟಿಯಂಗಡಿ ನಾರಾಯಣ ರಾವ್, ಬಿ.ಎಂ.ಶ್ರೀ, ದ.ರಾ.ಬೇಂದ್ರೆ,
6. ನಾಟಕ : ಬಸವಪ್ಪ ಶಾಸ್ತ್ರಿ, ಚುರುಮುರಿ ಶೇಷಗಿರಿ ರಾವ್, ಕರ್ಕಿ ವೆಂಕಟರಮಣ ಶಾಸ್ತ್ರಿ
7. ಕಾದಂಬರಿ : ಯಾದವಕವಿ, ಕೆಂಪು ನಾರಾಯಣ, ಬಿ. ವೆಂಕಟಾಚಾರ್ಯ, ಗುಲ್ವಾಡಿ ವೆಂಕಟರಾವ್, ಗಳಗನಾಥ.

**ಘಟಕ - 3 : ಪಠ್ಯಗಳು - 30 ಅಂಕಗಳು - 18 ಗಂಟೆಗಳು**

**ಪದ್ಯಗಳು**

1. **ತರವಲ್ಲ ತಗಿ ನಿನ್ನ ತಂಬೂರಿ** - ಶಿಶುನಾಳ ಶರೀಫ
2. **ಬಿಡ್ಡಿಯಬೇ ಮುದುಕಿ** - ಶಿಶುನಾಳ ಶರೀಫ
3. **ಜೀವನ ಗೀತ** - ಹಟ್ಟಿಯಂಗಡಿ ನಾರಾಯಣ ರಾವ್
4. **ಕನ್ನಡ ಹೆಣ್ಣು** - ಬಿ.ಎಂ.ಶ್ರೀ
5. **ನಾನು ಬಡವಿ** - ಅಂಬಿಕಾತನಯ ದತ್ತ

**ಗದ್ಯಗಳು**

6. **ಚಂದ್ರಗುಪ್ತ ಬಂಧ ವಿಮೋಚನ** - ಕೆಂಪುನಾರಾಯಣ
7. **ಸೀತಾ ಪರಿತ್ಯಾಗ** - ಮುದ್ದಣ
8. **ಕಮಲಾಪುರದ ಹೊಟ್ಲಿನಲ್ಲಿ** - ಪಂಜೆ ಮಂಗೇಶರಾವ್

# ಪ್ರಥಮ ಬಿ.ಎ. ಕನ್ನಡ ಐಚ್ಛಿಕ

ಎರಡನೆ ಚತುರ್ಮಾಸ

# ಸಾಹಿತ್ಯ ಮಂಗಳ -2 (ಎ 4)

ಪ್ರಧಾನ ಸಂಪಾದಕರು : **ಪ್ರೊ. ಸೋಮಣ್ಣ**

ಕಾರ್ಯ ನಿರ್ವಾಹಕ ಸಂಪಾದಕರು : **ಡಾ. ಮಾಧವ ಎಂ.ಕೆ.**

ಸಂಪಾದಕರು : **ಡಾ. ಹೆಚ್.ಜಿ. ಶ್ರೀಧರ, ಡಾ. ಸುಬ್ರಹ್ಮಣ್ಯ ಭಟ್, ಶ್ರೀಮತಿ ಗೀತಾ ಕುಮಾರಿ**

| Sl. No. | Course Code | Title of the Course | Category of Courses | Teaching Hours per week (L+T+P) | SEE | CIE | Total Marks | Credits |
|---|---|---|---|---|---|---|---|---|
| 1. | ಸಾಹಿತ್ಯ ಮಂಗಳ ಎರಡನೆ ಚತುರ್ಮಾಸ | ಪತ್ರಿಕೆ - ಎ4 ಆಧುನಿಕ ಕನ್ನಡ ಸಾಹಿತ್ಯ -ಪ್ರೇರಣೆಗಳು | | 2+1+0 | 60 | 40 | 100 | 6 |

**ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನ್ವಯ**

**ಪ್ರಥಮ ಬಿ.ಎ. ಕನ್ನಡ ಐಚ್ಛಿಕ**
**ದ್ವಿತೀಯ ಚತುರ್ಮಾಸ ಪಠ್ಯಗಳು**

## ಸಾಹಿತ್ಯ ಮಂಗಳ - 2 (ಎ4)

# ಪರಿವಿಡಿ

**ಪತ್ರಿಕೆ ಎ-4 (ವಾರಕ್ಕೆ 3 ಗಂಟೆಗಳು; ಸೆಮಿಸ್ಟರ್ 36 ಗಂಟೆಗಳು; 60 ಅಂಕಗಳು)**
**ಪತ್ರಿಕೆಯ ಶೀರ್ಷಿಕೆ : ಆಧುನಿಕ ಕನ್ನಡ ಸಾಹಿತ್ಯ - ಪ್ರೇರಣೆಗಳು**

**ಘಟಕ - 1 : ಸಾಹಿತ್ಯ ಚರಿತ್ರೆ - 30 ಅಂಕಗಳು - 18 ಗಂಟೆಗಳು**

1. ನವೋದಯ, ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯ ಸಾಹಿತ್ಯದ ಪ್ರೇರಣೆಗಳು ಮತ್ತು ಲಕ್ಷಣಗಳು
2. ಪರಿಚಯ ಮಾಡಿಕೊಳ್ಳಬೇಕಾದ ಬರಹಗಾರರು : ಕುವೆಂಪು, ಮತಿನ, ಅನಕೃ, ನಿರಂಜನ, ವಿ.ಕೃ. ಗೋಕಾಕ್, ಗೋಪಾಲಕೃಷ್ಣ ಅಡಿಗ, ಎಸ್.ಎಲ್.ಭೈರಪ್ಪ, ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ದೇವನೂರು ಮಹಾದೇವ, ಸಿದ್ಧಲಿಂಗಯ್ಯ, ಬೊಳುವಾರು ಮಹಮ್ಮದ್ ಕುಂಞ್

**ಘಟಕ - 2 : ಮಹಿಳಾ ಸಾಹಿತ್ಯ ಪ್ರೇರಣೆಗಳು ಮತ್ತು ಲೇಖಕಿಯರು**

ಪರಿಚಯ ಮಾಡಿಕೊಳ್ಳಬೇಕಾದ ಲೇಖಕಿಯರು : ಸಂತೂಬಾಯಿ ನೀಲಗಾರ, ನಂಜನಗೂಡು ತಿರುಮಲಾಂಬ, ಅನುಪಮ ನಿರಂಜನ, ಕೊಡಗಿನ ಗೌರಮ್ಮ, ವೈದೇಹಿ, ಸಾ.ರಾ. ಅಬೂಬಕರ್

**ಘಟಕ - 3 : ಪಠ್ಯಗಳು - 30 ಅಂಕಗಳು - 18 ಗಂಟೆಗಳು**
**ಪದ್ಯಗಳು**

1. **ಗೊಬ್ಬರ** - ಕುವೆಂಪು
2. **ನಾವೆಲ್ಲರೂ ಒಂದೆ ಜಾತಿ** -ಎಂ. ಗೋಪಾಲಕೃಷ್ಣ ಅಡಿಗ
3. **ನಿಮ್ಮೊಡನಿದ್ದೂ ನಿಮ್ಮಂತಾಗದೆ** - ಕೆ.ಎಸ್. ನಿಸಾರ್ ಅಹಮದ್
4. **ಸಂತೆ** - ಸಿದ್ಧಲಿಂಗಯ್ಯ
5. **ರುರು ಪ್ರಮದಾ ಪ್ರೀತಿ** - ಸ. ಉಷಾ

**ಗದ್ಯಗಳು**

6. **ಧನಿಯರ ಸತ್ಯನಾರಾಯಣ** - ಕೊರಡ್ಕಲ್ ಶ್ರೀನಿವಾಸ ರಾವ್
7. **ದತ್ತ** - ದೇವನೂರು ಮಹಾದೇವ
8. **ಹೊಸಹೆಜ್ಜೆ** - ಗಂಗಾ ಪಾದೇಕಲ್ಲು

# ಕಡ್ಡಾಯ ಕನ್ನಡ ಪಠ್ಯ (Functional Kannada)
## ಕನ್ನಡೇತರರಿಗಾಗಿ ಕನ್ನಡ ಕಲಿಕೆ

ಪ್ರಧಾನ ಸಂಪಾದಕರು : **ಪ್ರೊ. ಸೋಮಣ್ಣ**

ಕಾರ್ಯನಿರ್ವಾಹಕ ಸಂಪಾದಕರು : **ಡಾ. ಮಾಧವ ಎಂ.ಕೆ.**

ಸಂಪಾದಕರು : **ಡಾ. ಸಂಪತ್ ಕುಮಾರ್ ಬಿ.ಪಿ, ಡಾ. ಸಾಯಿಗೀತಾ, ಡಾ. ಸುಧಾ ಕುಮಾರಿ**

| | |
|---|---|
| Course Title | ಕನ್ನಡೇತರರಿಗಾಗಿ ಕನ್ನಡ : ಕನ್ನಡ ಕಲಿಕೆ |
| Total Contact Hourse : 48 - 52 | Course Credits : 03 |
| Formative Assessment Marks : 40 (CIE) | Duration of ESA / Exam : 3 hours |
| Model Syllabus Authors : Multiple Authors | Summative Assessment Marks : 60 (SEE) |

# NEP ರಾಷ್ಟ್ರೀಯ ಶಿಕ್ಷಣ ನೀತಿ - 2020ರ ಅನ್ವಯ

**ಮಂಗಳೂರು ವಿಶ್ವವಿದ್ಯಾನಿಲಯ**

## ಕಡ್ಡಾಯ ಕನ್ನಡ ಪಠ್ಯ (Functional Kannada)

## ಕನ್ನಡೇತರರಿಗಾಗಿ ಕನ್ನಡ ಕಲಿಕೆ

**ವಾರದಲ್ಲಿ 4 ಗಂಟೆ, ಸೆಮಿಸ್ಟರ್ 48 ಗಂಟೆಗಳು**

Weekly 4 Hours, 48 Hours/ Sem.

ಪರಿವಿಡಿ / Content Structure

**ಭಾಗ 1: ಆರಂಭಿಕ ಹೆಜ್ಜೆ 15 ಅಂಕಗಳು**

Part 1 : Primary Steps **(12 ಗಂಟೆಗಳು)**

1. **ಲಿಪೀಕರಣ ಕೀಲಿ (ಪರಿಷ್ಕೃತ ರೋಮನ್ ಲಿಪಿ ಪರಿಚಯ)** Transcription Key
2. ಕನ್ನಡ ಅಕ್ಷರ ಪರಿಚಯ – ಸ್ವರ, ವ್ಯಂಜನ ಮತ್ತು ಒತ್ತಕ್ಷರಗಳು Introduction of Kannada Alphabet

**ಭಾಗ 2 : ಪದಸಂಪತ್ತು 15 ಅಂಕಗಳು**

Part 2 : Vocabulary **(12 ಗಂಟೆಗಳು)**

1. ಪ್ರಶ್ನಾಪದಗಳು Questioning Words
2. ಸರ್ವನಾಮಗಳು Pronouns
3. ಸಾಮಾನ್ಯ ಬಳಕೆಯ ಪದಗಳು Common words
4. ಕ್ರಿಯಾಪದಗಳು Verbs

**ಭಾಗ : 3 ವಾಕ್ಯರಚನೆ - ಸಂಭಾಷಣೆ 15 ಅಂಕಗಳು**

Part 3 : Sentence formation – Conversation **(12 ಗಂಟೆಗಳು)**

1. ವಿಭಕ್ತಿ ಪ್ರತ್ಯಯಗಳು Noun Cases
2. ಸರಳ ವಾಕ್ಯಗಳು, ಸಂಯುಕ್ತ ವಾಕ್ಯಗಳು Simple and Compound Sentences
3. ಭೂತ, ವರ್ತಮಾನ Tenses and sentences
4. ಪ್ರಶ್ನೋತ್ತರಗಳು Questions and Answers

**ಭಾಗ : 4 ಮಾತು ಮತ್ತು ಅರಿವು 15 ಅಂಕಗಳು**

Part 4 : Speech and Knowledge **(12 ಗಂಟೆಗಳು)**

1. ಪರಿಸರದ ಅರಿವು - ಮಿನಿಮಾಟ Environmental Knowledge - Minimata
2. ಗಾದೆಗಳು - ಆರೋಗ್ಯವೇ ಭಾಗ್ಯ Proverbs – Health is wealth
3. ಅನುವಾದ ಪರಿಚಯ Translation
4. ಕನ್ನಡ ನಾಡು ನುಡಿ ಪರಿಚಯ Introduction to Kannada Land and Language

ಪ್ರಧಾನ ಸಂಪಾದಕರು : **ಪ್ರೊ. ಸೋಮಣ್ಣ**

ಕಾರ್ಯನಿರ್ವಾಹಕ ಸಂಪಾದಕರು : **ಡಾ. ಮಾಧವ ಎಂ.ಕೆ.**

ಸಂಪಾದಕರು : **ಡಾ. ಸಂಪತ್ ಕುಮಾರ್ ಬಿ.ಪಿ, ಡಾ. ಸಾಯಿಗೀತಾ, ಡಾ. ಸುಧಾ ಕುಮಾರಿ**

NUDI KANNADA - Functional Kannada

Model Question Paper

Part I : 15 marks

1. Choose the appropriate word in Revised Roman script. 1X5=5
   eg: karnaaTaka - kaarNataka, Karnataka, karnaaTaka
2. Write the Kannada alphabet in Kannada script 1X10=10

Part II : 15 Marks

1. Match the following. 1X5=5
   eg: a) face tarakaari
   b) vegetable mukha
2. Fill in the blanks. 1X5=5
   eg: a) adu _____ pennu. (my)
3. Give the Kannada/English words to the words given below. 1X5=5
   eg: a) night, sky
   b) head, hair
   c) aayaasa, aaroogya
   d) ippatta aidu, naalku

Part III: 15 Marks

1. biTTa pada tumbiri. (Vibhakti pratyaya) 1X5=5
   eg: _____ mane beeku. (he)
2. ii keLagina praSnegaLige uttarisi. 1X5=5
3. ii keLagina padagaLannu anukramavaagi baLasi kanishTha hattu vaakyagaLannu racisiri. 0.5x10 = 5

| | | | |
|---|---|---|---|
| adu | ondu | haLe | pensilu |
| idu | nanna | kappu | baTTe |

Or

mane, maarukaTTe yaavudaadarondu kaDe naDeyuva kaalpanika sambhaashaNeyannu bareyiri.

Part IV : 15 Marks

1. Translate these questions to Kannada and answer it. 1x5=5
   eg: what is minimaaTa?
2. Write 5 proverbs in Kannada or translate the paragraph given below. 1x5=5
3. Choose one topic and write a short note. 1x5=5

# ಪ್ರಥಮ ಬಿ.ಎ./ಬಿಎಸ್‌ಡಬ್ಲ್ಯು
# ಬಿ.ಎ.(ಹೆಚ್‌ಆರ್‌ಡಿ)/ಬಿಎ(ಎಸ್‌ಡಿಎಸ್) ಕನ್ನಡ ಭಾಷಾ ಪಠ್ಯ

**BA / BSW/ HRD/ SDS Degree / Honours Degree Programme, Arts subjects**

ಮೊದಲ ಚತುರ್ಮಾಸ

| | |
|---|---|
| Course Title | ಬಿ.ಎ., ಬಿ.ಎಸ್.ಡಬ್ಲ್ಯೂ - ಕನ್ನಡ ಭಾಷಾ ಪಠ್ಯ |
| Total Contact Hourse : 52 to 56 | Course Credits : 03 |
| Formative Assessment Marks : 40 | Duration of ESA / Exam : 3 hours |
| Model Syllabus Authors : Multiple Authors | Summative Assessment Marks : 60 (SEE) |

| ವಿವರಗಳು | ಬೋಧನಾ ಅವಧಿ |
|---|---|
| ಘಟಕ - 1 ಕನ್ನಡ ನಾಡು ನುಡಿ ಚಿಂತನೆ | 13/14 |
| ಘಟಕ - 2 ಪ್ರಕೃತಿ | 13/14 |
| ಘಟಕ - 3 ಬಾಲ್ಯ | 13/14 |
| ಘಟಕ - 4 ಸಂಕೀರ್ಣ | 13/14 |

**ಘಟಕ -1 ಕನ್ನಡ ನಾಡು-ನುಡಿ-ಚಿಂತನೆ**

ಕಲಾ ಕನ್ನಡ ಪಠ್ಯವನ್ನು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳಿಗೆ ಅನುಗುಣವಾಗಿ ರೂಪಿಸಲಾಗಿದೆ. ಇಲ್ಲಿಯ ಮುಖ್ಯ ವಿಷಯಾಧಾರಿತ ಪಠ್ಯಕ್ರಮ. ಈ ಮೂಲಕ ಕಲಾ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಕೌಶಲ್ಯವನ್ನು ಕಲಿಸುವುದರ ಜೊತೆಗೆ ಕನ್ನಡ ಸಾಹಿತ್ಯ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಪರಿಚಯಿಸುವುದು ಮುಖ್ಯ ಆಶಯವಾಗಿದೆ.

ಕನ್ನಡ ಭಾಷಾ ಕಲಿಕೆಯ ನಾಲ್ಕು ಆಯಾಮಗಳಾದ ಓದುವುದು, ಬರೆಯುವುದು, ಅರ್ಥ ಮಾಡಿಕೊಳ್ಳುವುದು, ಮಾತಾಡುವುದು ಇವುಗಳನ್ನು ಸಮರ್ಪಕವಾಗಿ ಕಲಿಸುವ ಪಠ್ಯದೊಂದಿಗೆ ಅಭ್ಯಾಸಗಳನ್ನು ರೂಪಿಸಲಾಗಿದೆ.

ವಿದ್ಯಾರ್ಥಿಗಳಲ್ಲಿ ಹೊಸ ಆಲೋಚನಾ ಕ್ರಮಗಳನ್ನು ರೂಪಿಸುವುದು, ವೈಚಾರಿಕ ಮನೋಭಾವವನ್ನು ಬೆಳೆಸುವುದು, ಪ್ರಾಯೋಗಿಕ ಚಿಂತನೆಗೆ ಒತ್ತು ಕೊಡುವುದು ಒಟ್ಟಾರೆಯಾಗಿ ಯುವ ಜನಾಂಗದ ಮನಸ್ಸನ್ನು, ವ್ಯಕ್ತಿತ್ವವನ್ನು ರೂಪಿಸುವುದು ಈ ಪಠ್ಯದ ಉದ್ದೇಶ. ಅದರೊಂದಿಗೆ ಕಲಾ ವಿದ್ಯಾರ್ಥಿಗಳು ಸೃಜನಶೀಲ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ಅಗತ್ಯವಾದ ಕೌಶಲ್ಯಾಧಾರಿತ ಪಠ್ಯ ಇದಾಗಿದೆ. ಇದಕ್ಕೆ ಪೂರಕವಾಗಿ ಪಠ್ಯವನ್ನು ವಿಷಯಾಧಾರಿತವಾಗಿ ರೂಪಿಸಲಾಗಿದೆ. ಈ ಮೂಲಕ ಬದುಕನ್ನು ಕುರಿತು ಸಮಗ್ರ ಗ್ರಹಿಕೆಯನ್ನು ವಿದ್ಯಾರ್ಥಿಗಳು ಪಡೆಯುವಲ್ಲಿ ಪಠ್ಯ ನೆರವಾಗುತ್ತದೆ.

ಕನ್ನಡ ನಾಡು ರೂಪುಗೊಂಡಿದ್ದರಿಂದ ಪ್ರಾರಂಭಿಸಿ ಅದರ ಶ್ರೀಮಂತಿಕೆ, ವೈಶಿಷ್ಟ್ಯ, ಭಾಷಾವಾರು ಪ್ರಾಂತ್ಯ ರಚನೆ ಏಕೀಕರಣ ಅದರ ಲೋಕದೃಷ್ಟಿ, ಕಲಾ ಪ್ರಕಾರಗಳಲ್ಲಿನ ಸಮೃದ್ಧತೆ, ರಾಜಕೀಯ ಸಾಮಾಜಿಕ ಚಿಂತನೆಗಳ ಸ್ವೋಪಜ್ಞತೆ, ಅದರ ಭೌಗೋಳಿಕ ಸೌಂದರ್ಯ, ವಿವಿಧ ಕ್ಷೇತ್ರಗಳಲ್ಲಿನ ಸಾಧಕರು, ಮಹತ್ತ್ವದ ಚಳುವಳಿಗಳು, ಭಾರತ ಮತ್ತು ವಿಶ್ವಕ್ಕೆ ಕನ್ನಡದ ಕೊಡುಗೆಗಳು ಇವುಗಳಲ್ಲಿ ಕೆಲವನ್ನು ಆಯ್ದು ಪಠ್ಯವನ್ನು ರೂಪಿಸಬೇಕು.

ಮೊದಲ ಘಟಕದಲ್ಲಿ ಕನ್ನಡ ನಾಡು ನುಡಿಗಳ ಇತಿಹಾಸ, ವೈಶಿಷ್ಟ್ಯ, ವೈಭವಗಳನ್ನು ಒಳಗೊಂಡ ಪರಿಚಯಿಸುವ ಪಠ್ಯಗಳನ್ನು ಇಲ್ಲಿ ನೀಡಲಾಗಿದೆ. ಇಂದಿನ ವಿದ್ಯುನ್ಮಾನ ಯುಗದಲ್ಲಿ ಸಾಹಿತ್ಯದಿಂದ ವಿಮುಖರಾಗುತ್ತಿರುವ ಯುವಪೀಳಿಗೆಗೆ ಸಾಹಿತ್ಯದ ಸಮಕಾಲೀನ ಔಚಿತ್ಯದ ಬಗ್ಗೆ ತಿಳಿಸುವುದು ಇಲ್ಲಿಯ ಮುಖ್ಯ ಆಶಯ. ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಕವಿತೆ, ಲೇಖನಗಳನ್ನು ಇಲ್ಲಿ ಕೊಡಲಾಗಿದೆ.

**ಘಟಕ 2 : ಪ್ರಕೃತಿ**

ಮನುಷ್ಯ ಜೀವಿಯು ಪ್ರಕೃತಿಯ ಅವಿಭ್ಯಾಂಜ ಅಂಗ. ಪ್ರಕೃತಿ ಮತ್ತು ಮನುಷ್ಯರ ನಡುವಿನ ಅನ್ಯೋನ್ಯ ಸಂಬಂಧ ಇಂದಿನ ಅಗತ್ಯ ಪ್ರಕೃತಿಯನ್ನು ಮೂಲದೇವತೆಯೆಂದು ನೋಡುವ ಆರಾಧನಾ ನೆಲೆ ಅಥವಾ ಮಾತೃನೆಲೆ. ಎರಡನೆಯದು ಪ್ರಕೃತಿಯು ಮನುಷ್ಯರ ಉಪಭೋಗಕ್ಕಾಗಿಯೇ ಇದೆಯೆಂದು ನೋಡುವ ಭೋಗವಾದಿ ನೆಲೆ, ಮೂರನೆಯ ಮುಖ್ಯವಾದ ನೆಲೆ ಎಂದರೆ ಸೌಂದರ್ಯದ ನೆಲೆ. ಇದು ಕಲಾ ಮೀಮಾಂಸೆಯ ಜೊತೆಯಲ್ಲಿಯೇ ಬೆಳೆದು ಬಂದಿದೆ. ಈ ಮೂರು ನೆಲೆಗಳ ಜೊತೆಯಲ್ಲಿಯೇ ಪ್ರಕೃತಿಯು ಮನುಷ್ಯರಿಗೆ ಗುರುವೂ, ಮಾದರಿಯೂ ಆಗುವ ಹಲವು ಅಂಶಗಳು ಇವೆ. ಸಕಲ ಜೀವಜಾತಗಳನ್ನು ಪೊರೆಯುವ, ಬದುಕಲು ಅವಕಾಶ ಮಾಡಿಕೊಡುವ ಸಹಬಾಳ್ವೆಯ ಮೂಲಪಾಠವನ್ನು ಪ್ರಕೃತಿಯಿಂದ ಕಲಿಯಬೇಕಿದೆ. ಹಾಗೆಯೇ ನೆಲೆಯ ನಾಗರಿಕತೆಯ ಮೌಲ್ಯ ವ್ಯವಸ್ಥೆಯನ್ನೇ ಪುನರ್ ರಚಿಸಲು ಅವಕಾಶ ಮಾಡಿಕೊಡುತ್ತದೆ. ನಿತ್ಯನೂತನತೆಯ ನೆಲೆ, ಶಾಶ್ವತ ಮತ್ತು ನಶ್ವರತೆಯ ನೆಲೆ ಜೀವಪರತೆಯ ನೆಲೆ / ಕ್ರಿಯಾಶೀಲತೆಯ ನೆಲೆ ಇತ್ಯಾದಿ ಅಂಶಗಳನ್ನು ಒಳಗೊಳ್ಳುವ ಪಠ್ಯಗಳನ್ನು ಸೇರಿಸಿಕೊಳ್ಳಬಹುದು. ಪ್ರಕೃತಿಯೊಂದಿಗಿನ ಅನ್ಯೋನ್ಯ ಸಂಬಂಧವನ್ನು ಮರೆತರೆ ಅಪಾಯ ಕಟ್ಟಿಟದ್ದು. ಅತಿಯಾದ ನಗರೀಕರಣದ ಮತ್ತು ಭೋಗಲಾಲಸೆಯಿಂದ ನಿಸರ್ಗದಿಂದ ದೂರ ಸರಿಯುತ್ತಿರುವ ಮನುಷ್ಯನನ್ನು ಮತ್ತೆ ಅದರ ಬಳಿಗೆ ತರುವುದು ಅತ್ಯಂತ ಅಗತ್ಯ. ಆದ್ದರಿಂದ ಎರಡನೇ ಘಟಕದಲ್ಲಿ ಕನ್ನಡದ ವಿವಿಧ ಕವಿಗಳ ಲೇಖಕರ ಪ್ರಕೃತಿ ಕುರಿತ ಪಠ್ಯಗಳನ್ನು ಸಂಯೋಜಿಸಿದೆ

**ಘಟಕ 3 : ಬಾಲ್ಯ**

ಬಾಲ್ಯವು ಮಾನವ ಬದುಕಿನ ಅತ್ಯಂತ ಮುಖ್ಯವಾದ ಮಾತ್ರವಲ್ಲ, ಸುಂದರವಾದ ಘಟ್ಟವೂ ಹೌದು. ಮನುಷ್ಯರ ವ್ಯಕ್ತಿತ್ವವು ಬಾಲ್ಯದ ಧಾತುವಿನಿಂದಲೇ ರೂಪುಗೊಳ್ಳುತ್ತದೆ. 'ಆ ಕಾಲವೊಂದಿತ್ತು ಬಾಲ್ಯ ತಾನಾಗಿತ್ತು  ಎನ್ನುವ ಕವಿವಾಣಿಯೂ ಇದನ್ನು ಸಮರ್ಥಿಸುತ್ತದೆ. ಬಾಲ್ಯದ ಮುಗ್ಧತೆ, ನಂಬಿಕೆ, ಕರಾರುಗಳಿಲ್ಲದ ಪ್ರೀತಿ, ಬದುಕಿನ ಪ್ರತಿ ಕ್ಷಣವನ್ನು ಉತ್ಕಟವಾಗಿ ಅನುಭವಿಸುವ ಮನಸ್ಥಿತಿ, ಕ್ಷಮಾಗುಣ, ಕುತೂಹಲ, ಪ್ರಶ್ನೆಗಳನ್ನು ಒಳಗೊಂಡ ಕಾಲವಿದು. ಹೀಗೆ ರಮ್ಯವಾಗಿ ಕಾಣಿಸುವ ಬಾಲ್ಯಕಾಲಕ್ಕೆ ದುರಂತದ ಮುಖವೂ ಇದೆ. ಬಾಲಕಾರ್ಮಿಕರಿಂದ ಹಿಡಿದು, ಶಿಕ್ಷಣ ವಂಚಿತರಾದ ಇನ್ನಿತರ ಹಲವು ಬಗೆಯ ಶೋಷಣೆ ಮತ್ತು ದೌರ್ಜನ್ಯಗಳಿಗೆ ಒಳಗಾಗುವ ಸಂದರ್ಭಗಳನ್ನೂ ಪಠ್ಯದ ತಯಾರಿಯ ಸಂದರ್ಭದ ಗಮನಿಸಬೇಕು. ಬಾಲ್ಯದಲ್ಲಿ ಎದುರಾದ ಹಲವು ಘಟನೆಗಳು ಇಡಿ ಬದುಕಿನ ಮೇಲೆ ಪರಿಣಾಮ ಬೀರುವಷ್ಟು ಪ್ರಬಲವಾಗಿರುತ್ತದೆ. ವ್ಯಕ್ತಿತ್ವವನ್ನು ರೂಪಿಸುವಲ್ಲಿ ಬಾಲ್ಯದ ಪಾತ್ರ ಪ್ರಮುಖವಾದುದು. ಇದೇ ತಾನೇ ಬಾಲ್ಯಾವಸ್ಥೆಯನ್ನು ದಾಟಿ ಹದಿಹರೆಯಕ್ಕೆ ಕಾಲಿಡುತ್ತಿರುವ ಪದವಿ ವಿದ್ಯಾರ್ಥಿಗಳಿಗೆ ತಮ್ಮ ಬಾಲ್ಯ ಬಣ್ಣಗಳನ್ನು ಮೆಲುಕು ಹಾಕುವ ಅವಕಾಶ ನೀಡಿ ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಅವರದೇ ಹೊಸಲೋಕವನ್ನು ಸೃಜಿಸುವಂತೆ ಪ್ರೇರೇಪಿಸುವ ರೀತಿಯ ಪಠ್ಯವನ್ನು ಇಲ್ಲಿ ರೂಪಿಸಿದೆ.

**ಘಟಕ 4 : ಸಂಕೀರ್ಣ**

ಈ ಭಾಗದಲ್ಲಿ ಕಲೆ ಮತ್ತು ಸಾಹಿತ್ಯ,  ಕಲೆ ಮತ್ತು ಮನೋವಿಕಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿಸಬೇಕು.

ಕಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಪಠ್ಯದಲ್ಲಿಲ್ಲದ ವಿಷಯಗಳನ್ನು ತಿಳಿಸಬೇಕು.

ಇದಕ್ಕೆ ಸಂಬಂಧಿಸಿದ ವಿಶೇಷ ಪಠ್ಯಗಳನ್ನು ಆಧರಿಸಿದಂತೆ ಜ್ಞಾನವನ್ನು ಹೆಚ್ಚಿಸುವುದಕ್ಕೆ ಆದ್ಯತೆ ನೀಡಬೇಕು.

ಪ್ರಥಮ ಚತುರ್ಮಾಸ ಬಿ.ಎ. 2021-22 ನೇ ಸಾಲಿನ ಕನ್ನಡ ಭಾಷ್ಯ ಪಠ್ಯಪುಸ್ತಕ

**NEP ರಾಷ್ಟ್ರೀಯ ಶಿಕ್ಷಣ ನೀತಿ - 2020ರ ಅನ್ವಯ**

**ಮಂಗಳೂರು ವಿಶ್ವವಿದ್ಯಾನಿಲಯ**

# ಪ್ರಥಮ ಬಿ.ಎ./ಬಿಎಸ್‌ಡಬ್ಲ್ಯು

# ಬಿ.ಎ.(ಹೆಚ್‌ಆರ್‌ಡಿ)/ಬಿಎ(ಎಸ್‌ಡಿಎಸ್) ಕನ್ನಡ

ಮೊದಲ ಚತುರ್ಮಾಸ

## ಕಲಾ ಗಂಗೋತ್ರಿ - 1

ಒಟ್ಟು ಕ್ರೆಡಿಟ್‌ಗಳು 3, ಬೋಧನಾ ಅವಧಿ 4+0+0,

ಸೆಮಿಸ್ಟರ್‌ನಲ್ಲಿ ಒಟ್ಟು 100 ಅಂಕಗಳು

SEE - ಸೆಮಿಸ್ಟರ್ ಅಂತ್ಯದ ಪರೀಕ್ಷೆ - 60 ಅಂಕಗಳು

CIE - ನಿರಂತರ ಆಂತರಿಕ ಮೌಲ್ಯಮಾಪನ - 40 ಅಂಕಗಳು

